Oct-94

ವಾನಸಿ

ತಿಂಗಳ ಪತ್ರಿಕೆ ಅಕ್ಟೋಬರ್ 1994

★ ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಮಹಾರಾಷ್ಟ್ರ ಮಹಿಳೆಯರ ಭಾಗವಹಿಸುವಿಕೆ

★ ಗುಲಾಬಿ ಗಮುಲು

★ ಸ್ತ್ರೀಯರ ಸಶಕ್ತತೆಗಾಗಿ ಶಿಕ್ಷಣ

★ ಮೈಸೂರಿನಲ್ಲಿ ಕರ್ನಾಟಕದ ಮಹಿಳಾ ಸ್ವಾಯತ್ತ ಸಂಸ್ಥೆಗಳ ಸಮಾವೇಶ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 9 ಸಂಚಿಕೆ : 9

ಅಕ್ಟೋಬರ್ - 1994

ಸಂಪಾದಕೀಯ ಮಂಡಳಿ :

ರಾಜೇಶ್ವರಿ ಎಚ್. ಎಸ್.,
ಚಂಪಾವತಿ ಎಚ್. ಎಸ್., ಸರಸ್ವತಿ ದು.,
ಸವಿತ ಎ., ಗಾಯತ್ರಿ ವಿ.

ಸಲಹೆ-ಸಹಕಾರ

ಇಳಾ ವಿಜಯಾ

ವಿಳಾಸ :

"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067

ಸಂಪರ್ಕ ವಿಳಾಸ


ನಂ. 457, 12ನೇ ಅಡ್ಡರಸ್ತೆ,
ಪಶ್ಚಿಮ ಕಾರ್ಡ್‌ರಸ್ತೆ, 2ನೇ ಹಂತ
ಮಹಾಲಕ್ಷ್ಮಿಪುರ, ಬೆಂಗಳೂರು–560 086

ಸೂಚನೆ : ಬಿಡಿ ಪ್ರತಿ : **3-00 ರೂ.**
ವಾರ್ಷಿಕ ಚಂದಾ : **25 ರೂ.**
ಆಜೀವ ಚಂದಾ : **300 ರೂ.**

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ...

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭



ಸಂಪಾದಕೀಯ

ಮಹಿಳಾ ಸಶಕ್ತತೆ – ಇಂದು ಪ್ರಪಂಚದಾದ್ಯಂತ ಚರ್ಚೆಯಾಗುತ್ತಿರುವ ವಿಚಾರ. ಮೊನ್ನೆ ಮೊನ್ನೆ ತಾನೆ ಬೆಂಗಳೂರಿನಲ್ಲಿ ಅಂಗನವಾಡಿ ಶಿಕ್ಷಕಿಯರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿ ಪೊಲೀಸರಿಂದ, ಪ್ರಭುತ್ವದಿಂದ ಹಿಂಸೆ ಅನುಭವಿಸಿದ್ದು ನಮ್ಮ ನೆನಪಿನಿಂದ ಇನ್ನೂ ಮಾಸಿಲ್ಲ. ಮಹಾರಾಷ್ಟ್ರದಲ್ಲಿ ಬೇರೊಬ್ಬನ ಜೊತೆ ಸಂಬಂಧ ಹೊಂದಿದ ಕಾರಣಕ್ಕಾಗಿ ಕುಡುಕ ಗಂಡ ಹಾಗೂ ಇತರ ಜನರಿಂದ ಬೀದಿಯಲ್ಲಿ ಹೊಡೆಸಿಕೊಂಡ, ದಂಡ ತೆರಲಾರದೇ ಅವಮಾನಿಸಿಕೊಂಡ ಹೆಣ್ಣೊಬ್ಬಳ ಅಳಲು ನಮ್ಮ ಎದೆಯಾಳದಲ್ಲಿದೆ. ಕೊರಾನ್ ವಿರುದ್ಧ ಸೊಲ್ಲೆತ್ತಿದ ಒಂದೇ ಕಾರಣಕ್ಕಾಗಿ ದೇಶ ಬಿಟ್ಟು ಇತರ ದೇಶದಲ್ಲಿ ವಾಸಿಸುತ್ತಿರುವ ತಸ್ಲೀಮ ನಜರೀನ್ ಉದಾಹರಣೆ ನಮ್ಮ ಮುಂದಿದೆ. ಐವತ್ತು, ನೂರು ರೂಪಾಯಿಗಾಗಿ ಬೆಳಿಗ್ಗೆ ಬೆಳಿಗ್ಗೆ ಬಸ್ಸುಗಳಲ್ಲಿ ಮಾರ್ಕೆಟಿಗೆ ಓಡಾಡುವ ಅಸಂಘಟಿತ ಮಹಿಳೆಯರ ಬವಣೆ ನಮಗೆ ಅರಿವಿದೆ. ರೈತ, ಕೂಲಿ, ಕಾರ್ಮಿಕ ಮಹಿಳೆಯರು ಅಸಮಾನ ವೇತನದಲ್ಲಿ ನಲುಗುವುದನ್ನು ನಾವು ಕಾಣುತ್ತಿದ್ದೇವೆ. ವರದಕ್ಷಿಣೆ ಸಮಸ್ಯೆ ಭೂತದಂತೆ ನಮ್ಮನ್ನು ಕಾಡುತ್ತಲೇ ಇದೆ. ಹೀಗೆ ಹಲವಾರು ಕ್ಷೇತ್ರಗಳಲ್ಲಿ ಹಲವಾರು ರೀತಿಗಳಲ್ಲಿ ಶೋಷಣೆಗೆ ಒಳಗಾಗಿರುವುದನ್ನು ನಾವು ಕಾಣುತ್ತೇವೆ. ಇವುಗಳಿಗೆಲ್ಲ ಮಹಿಳಾ ಸಶಕ್ತತೆ ಉತ್ತರವಾಗಿ ಬೆಳೆಯಬೇಕಾಗಿದೆ. ಈ ಸಶಕ್ತತೆ ಎಂದರೇನು? ಈ ಸಶಕ್ತತೆಯನ್ನು ಹೇಗೆ ಪ್ರಭಲಗೊಳಿಸಬೇಕು, ಯಾವ ಯಾವ ಹಂತದಲ್ಲಿ ಮಹಿಳಾ ಸಶಕ್ತತೆಯನ್ನು ಹೆಚ್ಚಿಸಲು ಪ್ರಯತ್ನಿಸಬಹುದು? ಈ ಪ್ರಶ್ನೆಗಳನ್ನು ಚರ್ಚಿಸುವುದು ಅಗತ್ಯ. ಇಲ್ಲಿ ಎರಡು ಲೇಖನಗಳಲ್ಲಿ ಮಹಿಳಾ ಸಶಕ್ತತೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಲು ಪ್ರಯತ್ನಿಸಲಾಗಿದೆ. ಒಂದು ಶಿಕ್ಷಣ ರಂಗದಲ್ಲಿ, ಇನ್ನೊಂದು ಮತದಾನ ರಾಜಕೀಯದಲ್ಲಿ. ಇಂತಹ ಅವಲೋಕನಗಳು ಇತರ ಕ್ಷೇತ್ರಗಳಲ್ಲಿಯೂ ನಡೆಯಬೇಕಾಗಿದೆ. ನಮ್ಮನ್ನು ಸಶಕ್ತರನ್ನಾಗಿಸಿಕೊಳ್ಳುವುದೇ ಕೆಲವು ಸಲ ನಮ್ಮೆಲ್ಲರ ಪ್ರಶ್ನೆಗಳಿಗೆ ಸಮರ್ಥ ಉತ್ತರವಾದೀತೇನೋ ಎಂಬ ಕಾರಣಕ್ಕೆ ಈ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಮಹಾರಾಷ್ಟ್ರ ಮಹಿಳೆಯರ ಭಾಗವಹಿಸುವಿಕೆ

ಮಹಾರಾಷ್ಟ್ರದ ಚರಿತ್ರೆಯಲ್ಲಿ ಮೊಟ್ಟಮೊದಲ ಬಾರಿಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ರಾಜಕೀಯ ರಂಗಕ್ಕೆ ಧುಮುಕಿದ್ದು 1991–92ರ ಪ್ರಾರಂಭದಲ್ಲಿ. ಆಗ ನಡೆದ ಸರ್ಕಾರದ ಅಂಗಗಳ ಸ್ಥಳೀಯ ಚುನಾವಣೆಗಳಲ್ಲಿ (ಮುನ್ಸಿಪಲ್ ಕಾರ್ಪೊರೇಷನ್, ಕೌನ್ಸಿಲ್ಸ್, ಜಿಲ್ಲಾ ಪರಿಷತ್ ಮತ್ತು ಪಂಚಾಯತ್ ಸಮಿತಿ) ಬಹಳ ಮಂದಿ ಮಹಿಳೆಯರು ಸ್ಪರ್ಧಿಸಿದ್ದರು. ಮಾರ್ಚ್ 1990ರಲ್ಲಿ ಕಾಂಗ್ರೆಸ್ (ಐ)ನ ಮುಖ್ಯಮಂತ್ರಿ ಶರತ್ ಪವಾರ್ ಸರ್ಕಾರದ ಅಂಗಗಳಲ್ಲಿ 30% ಮೀಸಲಾತಿಯನ್ನು ಹೆಂಗಸರಿಗೆ ನೀಡಿದ್ದು ಈ ರೀತಿಯ ಭಾಗವಹಿಸುವಿಕೆಗೆ ಕಾರಣವಾದ ಮುಖ್ಯ ಅಂಶ.

ಅಲ್ಲಿಯವರೆಗೆ ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಮಹಿಳೆಯರಿದ್ದರೂ ಅವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅಷ್ಟಾಗಿ ಅವಕಾಶ ನೀಡಿರಲಿಲ್ಲ. 30%ಮೀಸಲಾತಿಯಿಂದಾಗಿ ಎಲ್ಲಾ ರಾಜಕೀಯ ಪಕ್ಷಗಳೂ ತಮ್ಮ ಪಕ್ಷದೊಳಗಿನ ಅಥವಾ ಹೊರಗಿನ ಮಹಿಳೆಯರನ್ನು ತಮ್ಮ ಪ್ರತಿನಿಧಿಗಳಾಗಿ ನಿಲ್ಲಿಸುವುದು ಅನಿವಾರ್ಯವಾಯಿತು. ರಾಜಕಾರಣಿಗಳಿಗೆ ಸಂಬಂಧಪಟ್ಟ ಮಹಿಳೆಯರಿಗೇ ಈ ಅವಕಾಶಗಳು ದೊರಕಿಬಿಡುತ್ತವೆಯೆಂಬ ಆತಂಕವನ್ನು ಅನೇಕ ವ್ಯಕ್ತಿಗಳು, ಮಹಿಳಾ ಸಂಘಟನೆಗಳು, ಕಾಳಜಿಯುಳ್ಳ ಜನರು ವ್ಯಕ್ತಪಡಿಸಿದ್ದುಂಟು. ಪಕ್ಷದ ಒಳಗಿನ ಮಹಿಳೆಯರು ಈ ಬಗ್ಗೆ ಜಾಗೃತರಾಗಿ, ಪಕ್ಷದೊಳಗೆ ಕೆಲಸ ಮಾಡಿದ ಮಹಿಳೆಯರಿಗೇ ಸ್ಪರ್ಧಿಸಲು ಅವಕಾಶ ಸಿಗುವಂತೆ ಮಾಡುವುದಾಗಿ ನಿರ್ಧರಿಸಿದರು. ಶಿವಸೇನೆ, ಬಿ. ಜೆ. ಪಿ. ಪಕ್ಷಗಳು ಈ ಮೀಸಲಾತಿಗೆ ವಿರುದ್ಧವಾಗಿದ್ದಾಗ್ಯೂ ಕೂಡಾ ಚುನಾವಣೆಯ ಕಣದಲ್ಲಿ ಮಹಿಳೆಯನ್ನು ತಮ್ಮ ಪ್ರತಿನಿಧಿಗಳನ್ನಾಗಿ ನಿಲ್ಲಿಸುವುದು ಅನಿವಾರ್ಯವಾಯಿತು. ಇದಕ್ಕೆ ಎರಡು ಕಾರಣಗಳಿದ್ದವು:

ಮಹಿಳೆಯರಿಗೆ ವಿರುದ್ಧವಾದ ನಿರ್ಣಯ ತೆಗೆದುಕೊಂಡರೆ ಪಕ್ಷದ ಒಳಗಿನ ಮಹಿಳೆಯರ ವಿಶ್ವಾಸ ಕಳೆದುಕೊಳ್ಳಬೇಕಿತ್ತು. ಎರಡನೆಯದಾಗಿ ಚುನಾವಣೆಯಲ್ಲಿ ಸೋಲನ್ನು ಅನುಭವಿಸಬೇಕಾಗುವುದು ಎನ್ನುವ ಕಾರಣಕ್ಕಾಗಿ. ಈ 30 %ಮೀಸಲಾತಿಯಿಂದಾಗಿ ಪಕ್ಷದೊಳಗಿರದ ಮಹಿಳೆಯರೂ ಸ್ವತಂತ್ರ್ಯವಾಗಿ ಈ ಚುನಾವಣೆಯಲ್ಲಿ ಭಾಗವಹಿಸಿದ್ದು ಈ ಚುನಾವಣೆಯ ವಿಶೇಷ ಸಂಗತಿ. ಮಹಿಳಾ ಸಂಘಟನೆ, ಕಾರ್ಮಿಕ ಸಂಘಟನೆ, ಸಾಮಾಜಿಕ ಕಾರ್ಯಕರ್ತರು ಇನ್ನು ಕೆಲವು ಉದ್ಯೋಗಸ್ಥರು ಹೀಗೆ ಸ್ವತಂತ್ರವಾಗಿ ಸ್ಪರ್ಧಿಸಿದವರಲ್ಲಿ ಮುಖ್ಯರು. ಪಕ್ಷಗಳಿಂದ ಟಿಕೇಟ್ ಪಡೆಯದ ಮಹಿಳೆಯರೂ ಸ್ವತಂತ್ರ್ಯವಾಗಿ ಸ್ಪರ್ಧಿಸಿ ಗೆದ್ದುದುಂಟು. ಜೊತೆಗೆ ನಿರೀಕ್ಷಿಸಿದಂತೆ ತಮ್ಮ ಕುಟುಂಬದ ಸೀಟ್ ಉಳಿಸಿಕೊಳ್ಳಲೋಸುಗ ರಾಜಕಾರಣಗಳ ಸಂಬಂಧೀ ಹೆಂಗಸರೂ ಹೆಚ್ಚು ಸಂಖ್ಯೆಯಲ್ಲಿ ಸ್ಪರ್ಧಿಸಿದ್ದು ಕಂಡು ಬಂದಿತ್ತು.

30./.ಮೀಸಲಾತಿಯಿಂದಾಗಿಯೇ ಅಧಿಕ ಸಂಖ್ಯೆಯಲ್ಲಿ ಮಹಿಳೆಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗಿದ್ದು ಕಂಡುಬರುತ್ತದೆ. ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆಂಬುದೇ ಒಂದು ಸ್ಫೂರ್ತಿದಾಯಕ ವಿಚಾರವಾಗಿತ್ತು. ಹೆಂಗಸರು-ಹೆಂಗಸರ ವಿರುದ್ಧವೇ ಸ್ಪರ್ಧಿಸಬೇಕಾದ್ದರಿಂದ-ಗಂಡಸರ ವಿರುದ್ಧ ನಿಂತಾಗ ಎದುರಿಸಬೇಕಾದ ಹಿಂಸೆಯನ್ನಾಗಲೀ, ಚಾರಿತ್ರ್ಯ ವಧೆಯನ್ನಾಗಲೀ ಎದುರಿಸುವ ಅಗತ್ಯವಿರಲಿಲ್ಲ.

ಸ್ಥಳೀಯ ಸರ್ಕಾರದ ಅಂಗಗಳಲ್ಲಿ ಚುನಾಯಿತರಾದ ಈ ಮಹಿಳೆಯರ ಕೆಲಸದ ವೈಖರಿಯನ್ನು ಎಲ್ಲರೂ ಕುತೂಹಲದಿಂದ ನಿರೀಕ್ಷಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಹಲವಾರು ಪ್ರಶ್ನೆಗಳು ಕೇಳಿ ಬರುತ್ತವೆ. ತಮ್ಮ ಪ್ರದೇಶಗಳ ಜನರ ಕಷ್ಟ–ಕಾರ್ಪಣ್ಯಗಳನ್ನು ಈ ಮಹಿಳೆಯರು ಪುರುಷರಿಗಿಂತ ಹೆಚ್ಚು ಸಮರ್ಥವಾಗಿ ಪ್ರತಿನಿಧಿಸುವರೇ? ಈ ಮಹಿಳೆಯರ ಭಾಗವಹಿಸುವಿಕೆಯಿಂದಾಗಿ ಈ ಸರ್ಕಾರದ ಅಂಗಗಳಲ್ಲಿರುವ ಸ್ಥಿತಿ ಉತ್ತಮಗೊಳುತ್ತದೆಯೇ ? ಈ ಮಹಿಳೆಯರ ನಡುವೆ ಯಾವ ರೀತಿಯ ಅಲೈಯನ್ಸ್ ಕಂಡು ಬರುತ್ತದೆ ?

ಮಹಾರಾಷ್ಟ್ರದ ರಾಜಕೀಯ ಹಿನ್ನೆಲೆಯಲ್ಲಿ ಚುನಾ

ಯಿತ ಮಹಿಳೆಯರು ಸಮಸ್ಯೆಗಳನ್ನು ಹೇಗೆ ಎದುರಿಸುತ್ತಾರೆ ? ಹಿಂಸೆಯನ್ನು, ಚಾರಿತ್ರಿಕ ವಧೆ, ಗುಂಪುಗಾರಿಕೆ ಇಂತಹ ಪ್ರಶ್ನೆಗಳನ್ನು ಹೇಗೆ ಎದುರಿಸುತ್ತಾರೆ ? ರಾಜಕೀಯ ವ್ಯಕ್ತಿತ್ವ ರೂಪಿಸಿಕೊಳ್ಳುವಲ್ಲಿ ಮಹಿಳೆಯರಿಗೆ ಅಡಗಿರುವ - ತಡೆಗಳೇನು ? ಈ ಹೆಂಗಸರಿಗೆ ಕೆಲಸ ಮಾಡುವಲ್ಲಿ ಸರ್ಕಾರಿ ಸಂಸ್ಥೆಗಳಲ್ಲಿರುವ ಮಿತಿಗಳೇನು ? ವರ್ಗ, ಜಾತಿಯಂತಹ ಒಡೆದುಹೋದ ಈ ಸಮಾಜದಲ್ಲಿ ಎಷ್ಟರಮಟ್ಟಿಗೆ ಇವರು ಲಿಂಗಾಧಾರಿತ ಪ್ರಶ್ನೆಗಳನ್ನು ಎತ್ತಬಲ್ಲರು ? ಯಾವ ಸಾಮಾಜಿಕ/ಆರ್ಥಿಕ ಗುಂಪಿಗೆ ಸೇರಿದ ಮಹಿಳೆಯರು ಇವರಾಗಿದ್ದಾರೆ ? ಚುನಾಯಿತರಾದ ಸರ್ಕಾರಿ ಅಂಗಗಳಲ್ಲಿ ಎಷ್ಟರಮಟ್ಟಿಗೆ ಇವರು ಭಾಗವಹಿಸುತ್ತಾರೆ ? ಅವರಿಗೆ ಅವರದೇ ಆದ ಅಭಿಪ್ರಾಯಗಳು ಇರುತ್ತವೆಯೇ ಅಥವಾ ಅವರು ಪುರುಷರ ರಬ್ಬರ್ ಸ್ಟ್ಯಾಂಪ್ ಮಾತ್ರವಾಗಿರುತ್ತಾರೆಯೇ ? ಈ ಎಲ್ಲಾ ಪ್ರಶ್ನೆಗಳೂ ಬಹಳ ಮುಖ್ಯವಾದವುಗಳು.

ಕಳೆದ ಮೂವತ್ತು ವರ್ಷಗಳಿಂದ ಮಹಾರಾಷ್ಟ್ರದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆ ಜಾರಿಯಲ್ಲಿದೆ. 1962 ರಿಂದ ಗುಜರಾತ್, ಕರ್ನಾಟಕ, ಮತ್ತು ಆಂಧ್ರಪ್ರದೇಶಗಳ ಜೊತೆಗೆ ಪ್ರಾರಂಭವಾದ ಈ ವ್ಯವಸ್ಥೆ ಮಹಾರಾಷ್ಟ್ರದ ರಾಜಕೀಯದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದೆ. ಈ ಸ್ಥಳೀಯ ಸರ್ಕಾರಿ ಅಂಗಗಳಲ್ಲಿ ಸದಸ್ಯರಾಗಿರುವುದೆಂದರೆ ಅಧಿಕಾರ ಹಾಗೂ ಗೌರವವನ್ನು ಪಡೆಯುವಂತದಾಗಿರುತ್ತದೆ. ಇನ್ನೊಬ್ಬರ ಮೇಲೆ ನಿಯಂತ್ರಣ ಹೊಂದುವುದೂ ಇದರಿಂದ ಸಾಧ್ಯವಾಗುತ್ತದೆ. ಮುನ್ಸಿಪಲ್ ಕೌನ್ಸಿಲ್, ಹಾಗೂ ಕಾರ್ಪೊರೇಷನ್‌ಗಳಿಗೂ ಈ ಮಾತು ಅನ್ವಯಿಸುತ್ತದೆ. ಪಂಚಾಯಿತಿಗಳಲ್ಲಿ ಚುನಾಯಿತರಾದ ಹೆಂಗಸರ ಅನುಭವಗಳು ಮೇಲಿನ ಪ್ರಶ್ನೆಗಳ ಮೇಲೆ ಬೆಳಕು ಚೆಲ್ಲುವಂತಹವುಗಳಾಗಿವೆ.

ಸಜಾಬಾಯಿ ಕಾಟಕರ್ ಇವರ ಅನುಭವ ಕಣ್ತೆರೆಸುವಂತಹದು. 1979ರಿಂದ 1989ರಲ್ಲಿ ಈಕೆ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದವರು. ವರ್‌ಜುಲ್ ಈಕೆಯ ಗ್ರಾಮ. ಮೀಸಲಾತಿ ಸೀಟಿಗೆ ಸ್ಪರ್ಧಿಸಿ ಗೆದ್ದವರಲ್ಲ ಈಕೆ. ಜನರಲ್ ಸೀಟಿಗೆ ಸ್ಪರ್ಧಿಸಿ ಗೆದ್ದವರು. 20 ವರ್ಷದಲ್ಲಿಯೇ ಕ್ರಿಯಾಶೀಲಳಾಗಿದ್ದ ಈಕೆ ಆಕೆಯ ಗ್ರಾಮದಲ್ಲಿ ಗೌರವ-ಪ್ರೀತ್ಯಾಧರಗಳನ್ನು ಗಳಿಸಿದ್ದಳು. ಇದರಿಂದ ಹೆಚ್ಚು ಓಡಾಡುವುದೂ ಈಕೆಗೆ ಸಾಧ್ಯವಾಗಿತ್ತು. ಈ ಗ್ರಾಮದ ರಾಜಕೀಯ ಪಕ್ಷಗಳು ಸಜಾಬಾಯ್ ಕಾಟಕರ್ ಅವರನ್ನು ತಮ್ಮ ಪಕ್ಷದೊಳಗೆ ಎಳೆದುಕೊಳ್ಳಲು ಪ್ರಯತ್ನಪಟ್ಟಿದ್ದರು. ಆಕೆ ತಿರಸ್ಕರಿಸಿದ ಕಾರಣಕ್ಕಾಗಿ ಆಕೆಯ ಚಾರಿತ್ರ್ಯ ವಧೆ ಕೂಡಾ ಪ್ರಾರಂಭವಾಗಿತ್ತು. ಆದರೆ ಆ ಗ್ರಾಮದಲ್ಲಿ ಆಕೆ ಗೌರವಾನ್ವಿತಳಾದ್ದರಿಂದ ಆ ಗ್ರಾಮದ ಜನರು ಆಕೆಯ ಬಗೆಗಿನ ವದಂತಿ/ಪುಕಾರುಗಳನ್ನು ನಂಬಿರಲಿಲ್ಲ. ಆಕೆಗಿದ್ದ ಓಡಾಡುವ ಸಾಮರ್ಥ್ಯದಿಂದಾಗಿ ಯಾವಾಗೆಂದರೆ ಆಗ ತಾಲ್ಲೂಕ್ ಆಫೀಸಿಗೆ ಓಡಾಡುವುದು ಆಕೆಗೆ ಸಾಧ್ಯವಾಗಿತ್ತು. ಹೀಗಿರುವ ಓಡಾಟ ಜನರ ಕೆಲಸಗಳಿಗಾಗಿ ಎಂಬ ನಂಬಿಕೆಯೂ ಜನರಿಗಿತ್ತು. ಗರಜಾಲ್‌ನ ಪುರುಷನೊಬ್ಬ ಒಂದು ಹುಡುಗಿಯನ್ನು ಅತ್ಯಾಚಾರ ಮಾಡಿದಾಗ ಸಜಾಬಾಯಿ ಅವನನ್ನು ಹೊಡೆದದ್ದು ಮಾತ್ರವಲ್ಲ, ಇಡೀ ಸಮುದಾಯದ ಜೊತೆ ಕುಳಿತು ಮಾತನಾಡಿ ಅವನನ್ನು ಆ ಸಮುದಾಯದಿಂದಲೇ ಹೊರಹಾಕಬೇಕೆಂದು ನಿರ್ಧರಿಸಿದ್ದಳು. 1983ರಲ್ಲಿ ಆಕೆ ರಾಜಕೀಯದಿಂದ ನಿವೃತ್ತಳಾಗಲು ನಿರ್ಧರಿಸಿದಳು. ರಾಜಕೀಯ ಹೊಲಸಾಗಿದೆ, ಅದಕ್ಕೆ ಆಚೆ ಬಂದೆ ಎನ್ನುವ ಈಕೆ ಜಗಳವಾಡಿ ಬದುಕುವುದಕ್ಕಿಂತ ಭಜನೆಗಳನ್ನು ಹಾಡುವುದೇ ಉತ್ತಮ ಎಂದು ಅಭಿಪ್ರಾಯಪಡುತ್ತಾಳೆ. ಗಟ್ಟಿಗಿತ್ತಿಯರಾದ ಮಹಿಳೆಯರು ಇರುವ ಸಾಮಾಜಿಕ ಮಿತಿಗಳಲ್ಲಿಯೂ ಹೇಗೆ ಕೆಲಸ ಮಾಡಬಹುದು ಎಂಬುದನ್ನು ಮೇಲಿನ ಮಹಿಳೆಯ ಅನುಭವ ತಿಳಿಸಿಕೊಡುತ್ತದೆ.

ಮಹಾರಾಷ್ಟ್ರದ ಕೆಲವು ಹಳ್ಳಿಗಳಲ್ಲಿ ಕೇವಲ ಮಹಿಳಾ ಸದಸ್ಯೆಯರನ್ನೇ ಪಂಚಾಯಿತಿಗೆ ಆರಿಸಿದ ನಿದರ್ಶನಗಳಿವೆ. ಈ ಹಂತದಲ್ಲಿ ಸಾಮಾಜಿಕ ಚಳುವಳಿಯ, ಮಹಿಳಾ ಸಂಘಟನೆಗಳ, ಸಂಘರ್ಷ ವಾಹಿನಿ ಅಥವಾ ಶ್ರಮಿಕ ಸಂಘಟನೆಗಳಂತ ರಾಜಕೀಯ ಪಕ್ಷಗಳು ಮಹಿಳೆಯರನ್ನು ಚುನಾವಣೆಗೆ ನಿಲ್ಲಿಸುವಲ್ಲಿ ಮುಖ್ಯವಾದ ಪಾತ್ರವನ್ನು ವಹಿಸಿರುವುದು ಕಂಡು ಬರುತ್ತದೆ.

ಇಂಡೋಲಿಯ ಉದಾಹರಣೆಯಲ್ಲಿ ಮಹಿಳೆಯರು ಪಂಚಾಯತಿ ಚುನಾವಣೆಯಲ್ಲಿ ನಿಂತು ಎದುರಿಸಿದ ಅನುಭವಗಳನ್ನು ನೋಡಬಹುದಾಗಿದೆ. ಇಲ್ಲಿ 'ವಿಮೆನ್ ಪ್ಯಾನಲ್' ಚುನಾವಣೆಯಲ್ಲಿ ಸ್ಪರ್ಧಿಸಿ ಸೋತರೂ

ಹಲವಾರು ಪ್ರಶ್ನೆಗಳನ್ನು ಎತ್ತಿ, ಹಲವಾರು ಬದಲಾವಣೆಗಳನ್ನು ಮಾಡಿದುದು ಕಂಡು ಬರುತ್ತದೆ. ಇದರ ವಿವರಗಳನ್ನು ಇಂದುಮತಿ ಪಾಟಕರ್‌ರವರ ಲೇಖನ 'confirming male power : An all women's panel contests Panchayat Election' ಹಾಗೂ ಚೇತನ್ ಗಾಲರವರ 'women in Panchayat Election' ಲೇಖನಗಳಲ್ಲಿ ಕಾಣಬಹುದಾಗಿದೆ.

ಇಂಡೋಲಿ ಸಾಮಾಜಿಕ ಚಳುವಳಿಯ ಹೋರಾಟದಲ್ಲಿ ಒಂದು ಗಣನೀಯ ಚರಿತ್ರೆಯನ್ನು ಹೊಂದಿದೆ. 1932ರಲ್ಲಿ ಅನೇಕ ರಾಷ್ಟ್ರೀಯ ಚಳುವಳಿಗಳು ಇಲ್ಲಿ ತೀವ್ರತೆರನಾಗಿ ನಡೆದದ್ದು ಕಂಡು ಬರುತ್ತವೆ. ಹೀಗೆ ನಡೆದ ಎಲ್ಲಾ ಚಳುವಳಿಗಳಲ್ಲಿಯೂ ಹೆಂಗಸರು ಭಾಗಿಗಳಾಗಿದ್ದರು. 1938ರಲ್ಲಿ ವಿಭಿನ್ನ ಜಾತಿಯವರು ಇಲ್ಲಿ ಒಟ್ಟಿಗೆ ಊಟ ಮಾಡಿದ ಹಾಗೂ ಹರಿಜನರು ದೇವಸ್ಥಾನ ಪ್ರವೇಶ ಮಾಡಿದ ಸಾಮಾಜಿಕ ಚಳುವಳಿ ನಡೆದದು ಕಂಡು ಬರುತ್ತದೆ. ಇತ್ತೀಚಿನ ದಿನಗಳಲ್ಲಿ ಸ್ತ್ರೀ ಮುಕ್ತಿ ಸಂಘಟನೆ–ಈ ಪ್ರದೇಶದಲ್ಲಿ ತನ್ನ ಪ್ರಭಾವ ಹೊಂದಿರುವುದು ಕಂಡು ಬರುತ್ತದೆ.

ಮಹಾರಾಷ್ಟ್ರದ ಇತರೇ ಪ್ರದೇಶಗಳಲ್ಲಿಯಂತೆ ಇಂಡೋಲಿಯ ಪಂಚಾಯಿತಿಯೂ ಕೂಡಾ ಕಾಂಗ್ರೆಸ್ (ಐ) ನಿಂದ ನಿಯಂತ್ರಣಗೊಳ್ಳಲ್ಪಟ್ಟಿದೆ. ಈ ಪಂಚಾಯಿತಿಯಲ್ಲಿ ಲಂಚಕೋರಿಯಾಗಿದ್ದ ಸರಪಂಚನೊಬ್ಬನಿದ್ದ. ಈತ ಹಾಗೂ ಪಂಚಾಯುತಿಯಲ್ಲಿನ ಒಳ ಜಗಳಗಳ ಕಾರಣಗಳಿಂದಾಗಿ ಇಡೀ ಪಂಚಾಯುತಿಯನ್ನೇ ವಜಾ ಮಾಡಲಾಯಿತು. ಅನಂತರ ಎರಡು ವರ್ಷಗಳಲ್ಲಿ ಮತ್ತೆ ಹೊಸದಾಗಿ ಚುನಾವಣೆಗಳು ಸಾರಲ್ಪಟ್ಟವು. ಈ ಸಂದರ್ಭದಲ್ಲಿ ಸ್ತ್ರೀಮುಕ್ತಿ ಸಂಘಟನೆಯ ಉಷಾ ತಾಯಿ ನಿಕಮ್ ಮತ್ತು ಆಕೆಯ ಬೆಂಬಲಿಗರು 'ವಿಮೆನ್ ಪ್ಯಾನಲ್ಸ್'ನಿಂದ ಎಲ್ಲಾ ಹೆಂಗಸರು ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದರು. ಇವರ ಮುಖ್ಯ ಉದ್ದೇಶವನ್ನು ಪಾಟಕರ್‌ರವರ ಮಾತಿನಲ್ಲಿ ಹೇಳುವುದಾದರೆ, ರಾಜಕೀಯ ತಮ್ಮ ಜನ್ಮಸಿದ್ಧ ಹಕ್ಕು ಎಂದು ನಂಬಿದ ಶ್ರೀಮಂತ ಹಾಗೂ ಲಂಚಕೋರರಾಗಿದ್ದ ಜಾತೀಯ ರಾಜಕಾರಣಿಗಳಿಗೆ ಸವಾಲು ಮಾಡುವುದರ ಜೊತೆಗೆ ರಾಜಕೀಯ ಸಂಸ್ಕೃತಿಯಲ್ಲಿರುವ ಪುರುಷರ ಪ್ರಾಧಾನ್ಯತೆಯನ್ನು ಪ್ರಶ್ನಿಸುವುದಾಗಿತ್ತು.

ಬೀದಿಗಳಲ್ಲಿಯೇ ಮೀಟಿಂಗ್‌ಗಳು ಮಾಡಲ್ಪಟ್ಟವು. ಚರ್ಚೆಯ ನಂತರ ಯೋಗ್ಯರಾದ ಹೆಂಗಸರ ಹೆಸರುಗಳನ್ನು ಸೂಚಿಸಲಾಯಿತು. ಈ ಸಭೆಗಳಲ್ಲಿ ಮಹಿಳೆಯರ ಹಾಗೂ ದಲಿತರ ಸಮಸ್ಯೆಗಳನ್ನೂ ಸಹ ಚರ್ಚೆಗೆ ಎತ್ತಿಕೊಳ್ಳಲಾಗಿತ್ತು. ಹೀಗೆ 'ವಿಮೆನ್ ಪ್ಯಾನಲ್' ಅಸ್ತಿತ್ವಕ್ಕೆ ಬಂದು ಈ ಬಗ್ಗೆ ಇಂಡೋಲಿಯಲ್ಲಿ ಹೆಚ್ಚು ಚರ್ಚೆಗಳಾಗತೊಡಗಿದವು. ಈ ಹಂತದಲ್ಲಿ ವಿರೋಧ ಪಕ್ಷಗಳು ಜಾಗೃತಗೊಂಡವು. 'ವಿಮೆನ್ ಪ್ಯಾನಲ್' ವಿರುದ್ಧ ಕ್ರಿಯಾಶೀಲವಾಗಿ ಕೆಲಸ ಮಾಡತೊಡಗಿದವು. ಮಹಿಳೆಯರ ಬಗ್ಗೆ ವದಂತಿಗಳು, ಆರ್ಥಿಕ ಬ್ಲ್ಯಾಕ್ ಮೇಲ್ (ಉದ್ಯೋಗ ಕೊಡದಿರುವುದು, ವ್ಯವಸಾಯದ ಸವಲತ್ತುಗಳ ನೀಡದಿರುವುದು) ಮಾಡುವುದು, ವದಂತಿಗಳ ಹಬ್ಬಿಸುವುದು, ಕುಟುಂಬಗಳ ಮೇಲೆ ಒತ್ತಡ ಹೇರುವುದು, ಅವರ ಪುರುಷರಿಗೆ ಅವಹೇಳನ ಮಾಡುವುದು–ಈ ರೀತಿಯ ಅನೇಕ ಕಿರುಕುಳಗಳನ್ನು ಮಹಿಳೆಯರಿಗೆ ನೀಡಲಾಯಿತು. ಹಿಂದುಳಿದ ಹಾಗೂ ದಲಿತ ಜನಾಂಗದಿಂದ ಬಂದ ಕಡು ಬಡವ ಮಹಿಳೆಯರು ವಿರೋಧ ಪಕ್ಷಗಳಿಗೆ ಸವಾಲೆಸೆಯುವುದನ್ನು ಅವರಿಂದ ಸಹಿಸಿಕೊಳ್ಳಲಾಗಲಿಲ್ಲ. ಅದು ಅವರ ಕಪಾಳಕ್ಕೆ ಹೊಡೆದ ಅನುಭವವಾಗಿತ್ತು.

ಆದರೆ ಈ ಹಂತದಲ್ಲಿ ಬಹುಮಂದಿ ಮಹಿಳೆಯರು ಹಿಂದೆ ಸರಿದುಕೊಂಡರು. ಅವರ ಮೇಲೆ ಹೇರಲಾದ ಒತ್ತಡ, ಹಿಂಸೆಗಳನ್ನು ತಡೆದುಕೊಳ್ಳಲಾರದೇ ಚುನಾವಣೆಯ ಕಣದಿಂದ ಈ ಹೆಂಗಸರು ಹಿಂದೆ ಹೆಜ್ಜೆ ಇಟ್ಟರು. ಅವರ ಕುಟುಂಬಗಳ ಮೇಲೆ ಮಾತ್ರವಲ್ಲ, ಅವರ ಹೆಣ್ಣು ಮಕ್ಕಳ ಕುಟುಂಬಗಳ ಮೇಲೂ ಒತ್ತಡಗಳನ್ನು ಹೇರಲಾಗಿತ್ತು. ಅವರ ತಾಯಂದಿರು ಚುನಾವಣೆಗೆ ನಿಂತಲ್ಲಿ ಅವರ ಹೆಣ್ಣು ಮಕ್ಕಳನ್ನು ಕುಟುಂಬದಿಂದ ಓಡಿಸುವುದಾಗಿ ಗಂಡಂದಿರು ಬೆದರಿಕೆಯನ್ನು ಹಾಕಿದರು. ಈ ಹಂತದಲ್ಲಿ ಅನೇಕ ಮಹಿಳೆಯರು ಹಿಂದೆ ಸರಿದಾಗ ಉಷಾ ತಾಯಿ ನಿಕಮ್ ಧೃತಿಗೆಡಲಿಲ್ಲ. ಚುನಾವಣೆಗೆ ನೋಂದಾಯಿಸಲು ಎರಡೇ ದಿನ ಸಮಯುವಿರುವಾಗ ಆಕೆ ಚುನಾವಣೆಗೆ ಸ್ಪರ್ಧಿಸಲು ಹೊಸದಾಗಿ ಮಹಿಳೆಯರನ್ನು ಶೋಧಿಸತೊಡಗಿದ್ದರು. ಆಕೆ ಮುಸ್ಲಿಂ ಹಾಗೂ ದಲಿತ ಮಹಿಳೆಯರ ನಡುವೆ ಹೆಚ್ಚು ಚುನಾವಣಾ ಪ್ರಚಾರ ಮಾಡತೊಡಗಿದರು.

ಕೊನೆಯದಾಗಿ ಏಳು ಜನ ಮಹಿಳೆಯರು ಸಿದ್ಧರಾದರು. ಇದರಲ್ಲಿ ಕ್ಷೌರಿಕ ಜಾತಿಯ, ನವ ಬೌದ್ಧ ಹಾಗೂ ಮಾತಂಗ್ ಜಾತಿಗೆ ಸೇರಿದ ಮಹಿಳೆಯರೂ ಸೇರಿದಂತೆ ಏಳು ಮಂದಿ ಮಹಿಳೆಯರು ಕರಾಡ್‌ನಲ್ಲಿ ಚುನಾವಣೆಗೆ ತಮ್ಮ ಹೆಸರನ್ನು ನೋಂದಾಯಿಸಿದರು. ಚುನಾವಣೆಗೆ ಸಂಬಂಧಪಟ್ಟ ಅಧಿಕಾರಿಗಳು ಈ ಹೆಂಗಸರಿಗೆ ವಿರೋಧವಾಗಿದ್ದಾಗ್ಯೂ ಕೂಡಾ ಈ ಸ್ತ್ರೀಯರು ಚುನಾವಣೆಯ ಕಣದಿಂದ ಹಿಂದೆ ಸರಿಯಲಿಲ್ಲ.

ಕಾಸೇಗೋನ್ ಹಾಗೂ ಕಾನ್ಪುರದ ಸ್ತ್ರೀ ಮುಕ್ತಿ ಸಂಘಟನೆಯ ಕಾರ್ಯಕರ್ತೆಯರು ಈ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದರು. 'ರೈತ' ಹಾಗೂ 'ಚತ್ರುತಿ' ಈ ಎರಡು ಪ್ಯಾನಲ್‌ಗಳು 'ವಿಮೆನ್ಸ್ ಪ್ಯಾನಲ್'ಗೆ ವಿರುದ್ಧವಾಗಿ ಸ್ಪರ್ಧಿಸಿದ್ದವು. ಚುನಾವಣೆಗೆ ಸ್ಪರ್ಧಿಸಿದ್ದ ಹೆಂಗಸರಿಗೆ ತಾವು ಸೋಲುತ್ತೇವೆ ಎಂಬ ಅರಿವಿದ್ದರೂ ಚುನಾವಣೆಯ ಕಣದಿಂದ ಅವರು ಹಿಂದೆ ಸರಿಯಲಿಲ್ಲ.

ಈ 'ವಿಮೆನ್ಸ್ ಪ್ಯಾನಲ್' ಸೋತಿದ್ದೇನೋ ನಿಜ. ಆದರೆ ಇದರಿಂದ ಎರಡು ಲಾಭಗಳಾಗಿದ್ದವು.

ತಮ್ಮ ಜಾತಿಯ ಜನರನ್ನೇ ನಿಲ್ಲಿಸುತ್ತಿದ್ದ ವಿರೋಧ ಪಕ್ಷಗಳು ಚುನಾವಣೆಯಿಂದ ಹಿಂತೆಗೆದ ಮಹಿಳೆಯರ ಗಂಡಂದಿರನ್ನು ಚುನಾವಣೆಗೆ ನಿಲ್ಲಿಸುವುದು ಅನಿವಾರ್ಯವಾಗಿತ್ತು. ಹೀಗಾಗಿ ಕೆಳಜಾತಿಯ, ಬಡರೈತರ, ಕೂಲಿಕಾರರ ಪುರುಷರು ಚುನಾವಣೆಯಲ್ಲಿ ನಿಲ್ಲುವಂತಾಯಿತು. ಇದನ್ನು ಅನಿವಾರ್ಯವಾಗಿ ವಿರೋಧ ಪಕ್ಷದವರು 'ಪಾಲಿಸಿ'ಯಾಗಿ ಮಾಡಿಕೊಳ್ಳಬೇಕಾಯಿತು.

ಎರಡನೆಯದಾಗಿ ಮಹಿಳೆಯರೂ ಕೂಡಾ ಮನೆಯಿಂದ ಹೊರಗೆ ಬಂದು ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವುದು ಸಾಧ್ಯ ಎಂಬುದನ್ನು ಇಂಡೋಲಿನ ಜನ ಗುರುತಿಸುವಂತಾಯಿತು. ಇದೇ ರೀತಿಯ ಅನುಭವಗಳನ್ನು ಪಾಲ್‌ಶಿ ಹಳ್ಳಿಯಲ್ಲಿಯೂ ನೋಡಬಹುದಾಗಿದೆ. ಪಾಲ್‌ಶಿ 10,000 ಮತದಾರರನ್ನು ಹೊಂದಿರುವ ಒಂದು ಪುಟ್ಟ ಹಳ್ಳಿ. ಸತಾರಾ ಜಿಲ್ಲೆಯ ಮ್ಯಾನ್ ತಾಲೂಕದಲ್ಲಿ ಇರುವ ಈ ಹಳ್ಳಿಯಲ್ಲಿ 40% ದಲಿತರು, ಹಾಗೂ 20%ನಷ್ಟು ಮೇಲ್ಜಾತಿಯ ಜನರು ಇದ್ದಾರೆ. ಇಲ್ಲಿಯೂ ಕೂಡಾ ಕಾಂಗ್ರೆಸ್ (ಐ) ಹಾಗೂ ಕಾಂಗ್ರೆಸ್ (ಎಸ್) ಪಕ್ಷಗಳು ಕ್ರಿಯಾಶೀಲವಾಗಿದೆ. ಶೇತಕಾರಿ ಸಂಘಟನಾ ಹಾಗೂ ಸಂಘರ್ಷವಾಹಿನಿ ಸಂಘಟನೆಗಳು ಕೂಡಾ ಇಲ್ಲಿ ಪ್ರಭಾವ ಹೊಂದಿರುವುದು ಕಂಡು ಬರುತ್ತದೆ.

ಮ್ಯಾನ್ ತಾಲೂಕು ಬರಗಾಲ ಪೀಡಿತ ಪ್ರದೇಶ. ಹಾಗಾಗಿ ಗಂಡಂದಿರು ತಮ್ಮ ಹೆಂಡಂದಿರನ್ನು ಈ ಹಳ್ಳಿಯಲ್ಲಿಯೇ ಬಿಟ್ಟು ವಲಸೆ ಹೋಗುವುದು ಜಾಸ್ತಿ. ಸಂಘರ್ಷವಾಹಿನಿ ಹಾಗೂ ಶೇತಕಾರಿ ಸಂಘಟನೆಗಳು ಉದ್ಯೋಗದ ಅವಕಾಶಕ್ಕೋಸ್ಕರ ರಸ್ತೆ ತಡೆಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡುದುಂಟು.

ಇಲ್ಲಿ ನೀರಿನ ಸಮಸ್ಯೆ ಇರುವುದರಿಂದ ನೀರಿಗೆ ಯಾವಾಗಲೂ ಬೇಡಿಕೆ ಇರುತ್ತದೆ. ನೀರಿನ ಸರಬರಾಜು ನಡೆದರೆ ಅದೂ ಕೂಡಾ ಪ್ರಭಾವಯುತ ಕುಟುಂಬದ ಸೊತ್ತಾಗಿ ಬಿಡುತ್ತದೆ. ಉಳಿದ ಹಳ್ಳಿಗರು ನೀರು ಕಾಣುವುದೇ ಕಷ್ಟ. ಇದರಿಂದ ಬೇಸರಗೊಂಡ 50 ಜನ ಮಹಿಳೆಯರು ಜೂನ್ 25, 1986 ರಂದು ತಹಶೀಲ್ದಾರರ ಆಫೀಸ್ ಗೆರಾವು ಮಾಡಿ ನೀರಿಗಾಗಿ 'ಒತ್ತಾಯಿಸಿದರು. ಈ ಹೋರಾಟ ಫಲಪ್ರದವಾಗಿ ಸುಮಾರು ಹಳ್ಳಿಗರಿಗೆ ನೀರು ಸಿಗುವಂತಾಯಿತು. ಅನೇಕರು ಅನೇಕ ರೀತಿಯಲ್ಲಿ ಹಂಗಿಸಿದರೂ ಹೆಂಗಸರು ಹಿಂತೆಗೆಯದೇ ಹೋರಾಟ ನಡೆಸಿದುದರ ಫಲವಾಗಿ ಅವರಿಗೆ ನೀರು ಸಿಕ್ಕುವಂತಾಯಿತು. ಈ ಬಗ್ಗೆ ಮಹಿಳೆಯರ ಪ್ರತಿಕ್ರಿಯೆ ಹೀಗಿದೆ:

"ನಾವು ಹಂಗಿಸುವಿಕೆಯನ್ನು ನಿರ್ಲಕ್ಷಿಸಿದೆವು. ಸಮಾಜವು ಮಹಿಳೆಯರನ್ನು ಅಡಿಗೆ, ಒಲೆಗೇ ಸರಪಳಿಯಿಂದ ಬಂಧಿಸಲು ಪ್ರಯತ್ನಿಸುತ್ತದೆ."

ಈ ಹಿನ್ನೆಲೆಯಲ್ಲಿ ಇಲ್ಲಿಯ ಮಹಿಳೆಯರು ಚುನಾವಣೆಗೆ ಸ್ಪರ್ಧಿಸಲು ನಿರ್ಧರಿಸಿದರು. ಜಿಪ್ಸಿ ಮಹಿಳೆಯರು ಇವರಲ್ಲಿ ಪ್ರಮುಖರಾಗಿದ್ದರು. ದಲಿತ ಹೆಂಗಸರು ಅವರನ್ನು ಬೆಂಬಲಿಸಿದರು. 13 ಜನ ಮಹಿಳೆಯರ ಒಂದು 'ಮಹಿಳಾ ಪ್ಯಾನಲ್' ಪ್ರಾರಂಭವಾಗಿ ಅವರು ನೀರು, ಮಹಿಳೆಯರಿಗೆ ಶೌಚಾಲಯ, ಆರೋಗ್ಯ ಕೇಂದ್ರಗಳು ಇಂತಹ ಸಮಸ್ಯೆಗಳನ್ನು ಕೈಗೆತ್ತಿಕೊಂಡರು.

ಇದರಲ್ಲಿ ಕ್ರಿಯಾಶೀಲರಾದ ಮೂವರು ಮಹಿಳೆಯರು ಲಕ್ಷ್ಮೀಬಾಯಿ ಖಾರೆ, ಸುಮಾತಾಯಿ ಖಾರೆ, ಮತ್ತು ರುಕ್ಮಿಣೀಬಾಯಿ ಕೋರೆ. ಮಧ್ಯಮ ರೈತ ಕುಟುಂಬಗಳಿಗೆ ಸೇರಿದ ಈ ಮಹಿಳೆಯರು 5ನೇ ತರಗತಿಯವರೆಗೆ

ಓದಿಕೊಂಡವರು, ತಮ್ಮ ಗಂಡಂದಿರಿಂದ ಚುನಾವಣೆಗೆ ನಿಲ್ಲಲು ಬೆಂಬಲ ತೆಗೆದುಕೊಂಡವರು. ಇಂಡೋಲಿಯ ಮಹಿಳೆಯರಂತೆ ಇವರೂ ಹಲವಾರು ಟೀಕೆಗಳು.ವದಂತಿ, ಪುಕಾರು ಇತ್ಯಾದಿಗಳನ್ನು ಎದುರಿಸಬೇಕಾಯಿತು. “ಈ ಹೆಂಗಸರಿಗೆ ಅಡಿಗೆ ಮನೆ, ಮಕ್ಕಳನ್ನು ನೋಡಿಕೊಳ್ಳುವುದಕ್ಕೇ ಸರಿಯಾಗಿ ಬರುವುದಿಲ್ಲ. ಈಗ ರಾಜಕೀಯ ನಡೆಸಲು ಬಂದಿದ್ದಾರೆ' ಎಂಬ ರೀತಿಯ ಟೀಕೆಗಳು ಬಂದರೂ ಹೆದರದ ಈ ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದರು.

ಕೊನೆಯದಾಗಿ 11 ಜನ ಮಹಿಳೆಯರು ದಾಹವಾಡಿನಲ್ಲಿ ಚುನಾವಣೆಯ ಸ್ಪರ್ಧಿಗಳಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿದರು. ಗೆಲ್ಲಬಹುದಾದಂತಹ ಒಂದು ಸೀಟನ್ನು 5 ಮತಗಳಿಂದ ಮಾತ್ರ ಸೋತರೂ ಇಂಡೋಲಿಯಲ್ಲಿಯಂತೆ ಇಲ್ಲಿಯೂ ಹಲವಾರು ಬೆಳವಣಿಗೆಗಳು ಕಂಡುಬಂದವು. ರುಕ್ಮಿಣಿಯು ಮಾತಿನಲ್ಲಿ ಹೇಳುವುದಾದರೆ, “ಹೆಂಗಸರಿಗೆ ರಾಜಕೀಯದ ಕೆಲಸ ಮಾಡಲು ಬರುವುದಿಲ್ಲ ಎಂಬುದನ್ನು ನಾವು ತಪ್ಪು ಎಂದು ದೃಢಪಡಿಸಿದ್ದೇವೆ. ಚುನಾವಣೆಯ ಕೆಲಸದ ಸಂದರ್ಭದಲ್ಲಿ ನಾವು ಹೊಸ ಅನುಭವಗಳನ್ನು ಹೊಂದಿದೆವು. ನನ್ನ ಮದುವೆಯಾಗಿ 20 ವರ್ಷಗಳಾದರೂ ಇಡಿಯ ಹಳ್ಳಿಯನ್ನು ನಾನು ನೋಡಿಯೇ ಇರಲಿಲ್ಲ. ಆದರೆ ಚುನಾವಣೆಗಾಗಿ ಕೆಲಸ ಮಾಡುವಾಗ ಇಡಿಯ ಹಳ್ಳಿಯನ್ನೇಸುತ್ತಿದ್ದೇನೆ."

ಕುರಂಗಿ ಹಳ್ಳಿಯ ಇಂದೂಬಾಯಿ ವಾಸವಿಯ ಅನುಭವ ಇನ್ನೂ ಶ್ರೀಮಂತವಾದದ್ದು. ಶಹದಾ ತಾಲೂಕಿನ ಕುರಂಗಿ ಹಳ್ಳಿಯಿಂದ 1988ರಲ್ಲಿ ಈಕೆ ಚುನಾವಣೆಗೆ ನಿಂತದ್ದು ಮಾತ್ರವಲ್ಲ ಗೆದ್ದು ಆ ಹಳ್ಳಿಯ ಸರಪಂಚ್ ಆಗಿ ಆಯ್ಕೆಯಾಗಲ್ಪಟ್ಟರು. ಮಹಾರಾಷ್ಟ್ರದಲ್ಲಿ ಹೀಗೆ ಹೆಚ್ಚು ಜನ ಮಹಿಳೆಯರು ಸರಪಂಚಗಳಾಗಿ ಆಯ್ಕೆಯಾಗುತ್ತಿರುವುದು ಕುತೂಹಲಕಾರಿ ಸಂಗತಿ. ಇಂದೂಬಾಯಿಯ ಉದಾಹರಣೆಯಲ್ಲಿ ಮಹಿಳಾ ವಿಮೋಚನೆಗೆ ಹಾಗೂ ಜನರ ವಿಮೋಚನೆಗೆ ಬದ್ಧವಾದ ಸಂಘಟನೆಯ, ಹೋರಾಟದ ಭಾಗವಾಗಿ ಬೆಳೆದ ವ್ಯಕ್ತಿ ಎಷ್ಟೊಂದು ಕ್ರಿಯಾಶೀಲವಾಗಿ, ಜಯಪ್ರದವಾಗಿ ಕೆಲಸ ಸಾಧಿಸಲು ಸಾಧ್ಯ ಎಂಬುದು ತಿಳಿದು ಬರುತ್ತದೆ.

ಇಂದೂಬಾಯಿ ಹಾಗೂ ಆಕೆಯ ಗಂಡ ಇಬ್ಬರು 'ಶ್ರಮಿಕ್ ಸಂಘಟನೆ'ಯ ಭಾಗವಾಗಿದ್ದರು. ಇಂದೂಬಾಯಿ ಅನೇಕ ಮಹಿಳಾ ಸಮಾವೇಶದಲ್ಲಿ ಭಾಗವಹಿಸಿದ್ದರು. 1975 ಪೂನಾದ ಸ್ತ್ರೀ ಮುಕ್ತಿ ಸಂಘರ್ಷ ಪರಿಷತ್‌ನಲ್ಲಿ, 1987ರಲ್ಲಿ ಪಾಟ್ನಾದ ಮಹಿಳಾ ಸಮಾವೇಶದಲ್ಲಿ ಭಾಗವಹಿಸಿದ್ದರಲ್ಲದೇ, ಸ್ತ್ರೀ ಮುಕ್ತಿ ಆಂದೋಲನ ಸಂಪರ್ಕ ಸಮಿತಿಯ ಸಭೆಗಳಿಗೆ ಹೋಗುತ್ತಿದ್ದುದುಂಟು. 1988ರಲ್ಲಿ ಈಕೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದರೂ ಕೂಡಾ. ಸರಪಂಚ್ ಆಗಿ ಆಯ್ಕೆಗೊಂಡ ಈಕೆ ತೆಗೆದುಕೊಂಡ ಸಮಸ್ಯೆಗಳಾವುವು ? ಕಾರ್ಯ ನಿರ್ವಹಿಸಿದ ರೀತಿ ಏನು ಎಂಬುದು ಸ್ವಾರಸ್ಯಕರ ವಿಚಾರ.

ಆ ಹಳ್ಳಿಯ ಜನರು ಟಿ.ವಿ. ಬೇಕು ಎಂದು ನಿರ್ಧರಿಸಿದಾಗ ಇಂದೂಬಾಯಿ ಅದಕ್ಕೆ ವಿರುದ್ಧವಾಗಿ ಎರಡು ಬಾವಿಗಳು ಹಾಗೂ ಜನ ಭವನ ಕಟ್ಟಲು ನಿರ್ಧರಿಸಿದರು. ಈ ಕಟ್ಟಡವನ್ನು ಒಳ್ಳೆಯ ಸಾಮುಗ್ರಿಗಳಿಂದಲೇ ಕಟ್ಟಬೇಕೆಂಬ ಕಾರಣಕ್ಕಾಗಿ ಆಕೆ ಗ್ರಾಮಸೇವಕರ ಜೊತೆ ಸಾಮುಗ್ರಿಗಳನ್ನು ಕೊಳ್ಳಲು ಸ್ವತಃ ಹೋದದ್ದುಂಟು. ಕಟ್ಟಿದ ಕೆಲಸಗಾರರು ಸರಿಯಾಗಿ ಕೂಲಿ ಪಡೆಯುವಲ್ಲಿಯೂ ಸಹ ಆಕೆ ಸ್ವತಃ ಆಸಕ್ತಿಯನ್ನು ವಹಿಸಿದ್ದರು.

ಶ್ರಮಿಕ ಸಂಘಟನೆಯೊಂದಿಗೆ ಆಕೆಯ ಕ್ರಿಯಾಶೀಲ ಸಂಪರ್ಕದಿಂದಾಗಿ ಈಕೆಗೆ ಸರ್ಕಾರದ ಹಲವಾರು ಅಭಿವೃದ್ಧಿ ಕಾರ್ಯಗಳ ಮಾಹಿತಿ ಇತ್ತು. ಹಾಗಾಗಿ ಆ ಹಳ್ಳಿಯವರಿಗೆ, ವಿಶೇಷವಾಗಿ ಮಹಿಳೆಯರಿಗೆ ಹಣಕಾಸಿನ ನೆರವು ಹಾಗೂ ಸಾಲಕ್ಕಾಗಿ ಆಕೆ ಹಲವಾರು ಸಲಹೆಗಳನ್ನಿತ್ತು, ಹಲವಾರು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದರು. ಸಾಲಕ್ಕಾಗಿ ಅರ್ಜಿ ಸಲ್ಲಿಸುವಂತೆ ಸಲಹಿಸಿ ಅನೇಕ ರೀತಿಯ ನೆರವನ್ನು ಈಕೆ ನೀಡಿದರು. ಅರ್ಜಿಯನ್ನು ತುಂಬುವಾಗ ಹಳ್ಳಿಯ ಬಡಜನರು 50ರಿಂದ 100 ರೂ ತನಕ ಈಕೆಗೆ ಕೊಡಲು ಬಂದಾಗ ಆಕೆ ಮುಟ್ಟಲಿಲ್ಲ. ಲಂಚದ ಹಣ ಆಕೆ ಎಂದೂ ಬಯಸಿದವಳಲ್ಲ. ಕೊನೆಗೆ ಅರ್ಜಿಗೆ ಬೇಕಾಗುವುದು 5 ರಿಂದ ಹತ್ತು ರೂ. ಮಾತ್ರ ಎಂದು ಆಕೆ ಅವರಿಗೆ ಮನಗಾಣಿಸಿದಳು. ಅರ್ಜಿಗಳನ್ನು ತಾಲೂಕು ಆಫೀಸಿಗೆ ತಲುಪಿಸುವಾಗ ಆಕೆ ತನ್ನೊಡನೆ ಹತ್ತು ಜನ ಮಹಿಳೆಯರನ್ನು ಕರೆದೊಯ್ದಿದ್ದಳು. ಯಾಕೆಂದರೆ ತಾಲೂಕು ಆಫೀಸಿನವರು ಲಂಚ ಕೇಳಬಾರದು ಎಂಬ ಕಾರಣಕ್ಕಾಗಿ

ಹಾಗೂ ಈ ಮಹಿಳೆಯರಿಗೆ ಬೇರೆ ಬೇರೆ ಅಭಿವೃದ್ಧಿ ಸ್ಕೀಮ್‌ಗಳಿಗೆ ಅರ್ಜಿ ಸಲ್ಲಿಸುವ ವಿಧಾನ, ಸ್ಥಳ, ಜನ ಗೊತ್ತಾಗಲಿ ಎಂಬ ಕಾರಣಕ್ಕಾಗಿ. ಹಳ್ಳಿಯ ಹೆಂಗಸರ ಬೆಂಬಲದಿಂದಾಗಿ ಇಂದೂಬಾಯಿ ನವೆಂಬರ್, ಡಿಸೆಂಬರ್‌ನಲ್ಲಿ ನಡೆಯುವ ಹಳ್ಳಿಯ ಹಬ್ಬ ಸುಗಮವಾಗಿ ನಡೆಯುವಂತೆ ಮಾಡಿದಳಲ್ಲದೇ ಆ ದಿನಗಳಲ್ಲಿ ಮಟ್ಕಾ ನಡೆಯದಂತೆ, ಸಾರಾಯಿ ಮದ್ಯದಂಗಡಿಗಳು ತೆರೆಯದಂತೆ ಸಮರ್ಪಕವಾಗಿ ಕೆಲಸ ನಿರ್ವಹಿಸಿದ್ದಳು. ಹೀಗಾಗಿ ಇಂದೂಬಾಯಿ ಕುರಂಗಿ ಹಳ್ಳಿಯ ಮಹಿಳೆಯರ ವಿಶೇಷ ಗೌರವಾದರಗಳಿಗೆ ಪಾತ್ರಳಾಗಿದ್ದಳು. ಏಕೆಂದರೆ ಈ ಮೊದಲು ಇವರು ಲಂಚಕೋರ ಸರಪಂಚ್ ಹಾಗೂ ಗ್ರಾಮ ಸೇವಕರೊಂದಿಗೆ ಹೊಡೆದಾಡಬೇಕಿತ್ತು. ಈಕೆ ಪ್ರತಿತಿಂಗಳು ಗ್ರಾಮ ಸೇವಕ ಪಂಚಾಯಿತಿ ಸಭೆ ಕರೆಯಬೇಕೆಂದು ಒತ್ತಾಯಿಸುತ್ತಿದ್ದಳು. ಕರಂಗಿನಲ್ಲಿ ಆಗಲೇ ಅಸ್ತಿತ್ವದಲ್ಲಿದ್ದ ಮಹಿಳಾ ಮಂಡಳಿಗೆ ಒಂದು ಔಪಚಾರಿಕ ಅಂಗೀಕಾರ ಸಿಗುವಂತೆ ಈಕೆ ಮಾಡಿದಳು. ಬೆಳಗಾಗಲೀ, ಸಂಜೆಯಾಗಲೀ ಈಕೆ ಜನರನ್ನು ಭೇಟಿಯಾಗಲು ತಿರಸ್ಕರಿಸುತ್ತಿರಲಿಲ್ಲ. ಇಂದೂಬಾಯಿಯನ್ನು ಸರಳವಾಗಿ ಯಾರು ಬೇಕಾದರೂ ಹೋಗಿ ಭೇಟಿಯಾಗಬಹುದಿತ್ತು. ಹೀಗೆ ಇಂದೂಬಾಯಿ ಸರಪಂಚ್ ಆಗಿ ವಿಭಿನ್ನ ರೀತಿಯಲ್ಲಿ, ಪ್ರಾಮಾಣಿಕವಾಗಿ ಕೆಲಸ ಮಾಡಿದ್ದು ಮಹಿಳೆಯರ ಭರವಸೆಯನ್ನು ಹೆಚ್ಚಿಸುವಲ್ಲಿ ಅತ್ಯಂತ ಸಹಕಾರಿಯಾದದ್ದು ಕಂಡು ಬರುತ್ತದೆ.

1984ರಲ್ಲಿ ಪೂನಾ ಜಿಲ್ಲೆಯ ಇಂದೂಪುರ ತಾಲೂಕಿನ ವಸೌಜಿ ರೂಯಿ ಎಂಬ ಚಿಕ್ಕ ಹಳ್ಳಿಯಲ್ಲಿ ಭಾರತದ ಚರಿತ್ರೆಯಲ್ಲಿ ಮೊದಲಬಾರಿಗೆ ಮಹಿಳಾ ಪಂಚಾಯತಿ ಅವಿರೋಧವಾಗಿ ಆಯ್ಕೆಯಾಗಿದ್ದು ಕಂಡು ಬರುತ್ತದೆ. ಇದು ಹೇಗೆ ಸಾಧ್ಯವಾಯಿತು ಎಂಬುದು ಆಶ್ಚರ್ಯವಾದರೂ ಇಂದಿರಾಗಾಂಧಿಯವರ ನಾಯಕತ್ವದಿಂದ ಹೆಂಗಸರು ಸ್ಫೂರ್ತಿಗೊಂಡರು ಎಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಸರಪಂಚರಾಗಿರುವ ಪದ್ಮಾವತಿ ರಾಮಚಂದ್ರ ಕಾಡೆ ಹೇಳುತ್ತಾರೆ : "ಇಂದಿರಾ ಗಾಂಧಿಯವರು ಪ್ರಧಾನಮಂತ್ರಿಯಾಗಿ ಇಡಿಯ ದೇಶವನ್ನೇ ಆಳುವಾಗ ನಾವು ಈ ಚಿಕ್ಕ ಹಳ್ಳಿಯನ್ನು ಆಳಲಾರೆವೇ' ಎನ್ನುತ್ತಾರೆ. ಪುರುಷರನ್ನು ಏಕೆ ಸವಾಲು ಮಾಡಿದಿರಿ ಎನ್ನುವುದಕ್ಕೆ ಆಕೆ ಹೇಳುತ್ತಾರೆ, "....26 ವರ್ಷಗಳ ಕಾಲ ಮೂಲಭೂತ ಅವಶ್ಯಕತೆಯಾದ ನೀರನ್ನು ಒದಗಿಸುವುದಕ್ಕೆ ಕೂಡಾ ಅವರು ವಿಫಲರಾದರು. ಎಲ್ಲಾ ಸ್ತ್ರೀಯರೂ ದೂರದ ಬಾವಿಯಿಂದ ನೀರು ಹೊತ್ತು ತರಬೇಕಾದ ಪರಿಸ್ಥಿತಿ ಅವರಿಗೆ ಒದಗಿ ಬಂತು. ಜೊತೆಗೆ ಗದ್ದೆ ಹಾಗೂ ಅಡಿಗೆ ಮನೆಗಳಲ್ಲೂ ಅವರು ದುಡಿಯಬೇಕಿತ್ತು". ಇದೇ ರೀತಿ ಅಹಮದನಗರ ಜಿಲ್ಲೆಯ ರೇಲೋಗಸ್ ಶಿಂಧ್‌ನಲ್ಲಿ ಹಾಗೂ ಸೊಲ್ಲಾಪುರ ಜಿಲ್ಲೆಯ ಬಿಟಾರ್‌ಗೋನ ಹವೇಲಿಯಲ್ಲಿ ಈ ರೀತಿಯ ಮಹಿಳಾ ಪಂಚಾಯಿತಿಗಳು ಕಂಡು ಬರುತ್ತವೆ.

1989ರಲ್ಲಿ ನಡೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಚೇತ್‌ಕಾರಿ ಸಂಘಟನೆಯ ಕಾರ್ಯಕರ್ತೆಯರು ಒಂಭತ್ತು ಕಡೆಯಲ್ಲಿ 'ವಿಮೆನ್ಸ್ ಪ್ಯಾನಲ್ಸ್'ನಿಂದ ಮಹಿಳೆಯರನ್ನು ನಿಲ್ಲಿಸಿದರು. ಇದರಲ್ಲಿ ಏಳು ಕಡೆಯಲ್ಲಿ ಮಹಿಳೆಯರು ಆಯ್ಕೆಯಾದರು. ಸಾಲೋಡ್ ವಿಟ್‌ನರ್, ಮೆಡಿಕೇಡಾ, ಎರಸ್‌ಗೋನ್, ದುಡಾಗೋನ್ ಈ ಹಳ್ಳಿಗಳು ಇದರಲ್ಲಿ ಮುಖ್ಯವಾದವುಗಳು. ಈ ಎಲ್ಲಾ ಹಳ್ಳಿಗಳಲ್ಲಿಯೂ 'ವಿಮೆನ್ಸ್ ಪ್ಯಾನಲ್'ನ ಮಹಿಳೆಯರ ಗೆಲುವಿಗೆ ಚೇತ್‌ಕಾರಿ ಸಂಘಟನೆಯೇ ಹೆಚ್ಚು ಕಾರಣವಾದುದು ಕಂಡುಬರುತ್ತದೆ. ಸಾಲೋಡ್‌ನಲ್ಲಿ ಹಿಂದೂಗಳ ಪ್ರಮಾಣ ಅಧಿಕವಾಗಿದ್ದರೂ ಒಬ್ಬ ಮುಸ್ಲಿಂ ಮಹಿಳೆ ಸರಪಂಚ್ ಆಗಿ ಆಯ್ಕೆಯಾದರು. ಇತರೇ ಮಹಿಳೆಯರಂತೆ ಈ ಮಹಿಳೆಯರೂ ಪುರುಷರಿಂದ ಹಲವಾರು ಕಿರುಕುಳಗಳನ್ನು ಎದುರಿಸಬೇಕಾಯಿತು. ಏಕೆಂದರೆ ಅಷ್ಟು ವರ್ಷಗಳ ಕಾಲ ಹೊಂದಿದ್ದ ಅಧಿಕಾರವನ್ನು ಬಿಟ್ಟು ಕೊಡಲು ಪುರುಷರು ಸಿದ್ಧರಿರಲಿಲ್ಲ. ವಿಟ್‌ನರ್‌ನ ಉಪ ಸರಪಂಚ್ ಆಗಿರುವ ಇಂದಿರಾ ಪಾಟೀಲ್ ಹೇಳುತ್ತಾರೆ. "ಈ ಕೆಲಸ ನಾವು ಮಾಡಬಲ್ಲೆವೇ ಎಂಬ ಅನುಮಾನಗಳು ಪ್ರಾರಂಭದಲ್ಲಿ ನಮ್ಮಲ್ಲಿಯೇ ಇದ್ದವು. ಆದರೆ ಕ್ರಮೇಣ ಆ ಆತಂಕವನ್ನು ಮೀರಿದೆವು. ಪುರುಷರೂ ಸಹ ಇವರೇನು ಮಾಡಬಲ್ಲರು ಎಂದು ಆಶ್ಚರ್ಯ ಚಕಿತರಾಗಿದ್ದರು. ಆದರೆ ಅವರು ಮಾಡುವ ಕೆಲಸವನ್ನು ನಾವೂ ಮಾಡಬಲ್ಲೆವು ಎಂಬುದು ನಮ್ಮ ಪ್ರತಿಕ್ರಿಯೆಯಾಗಿತ್ತು. ಕಳೆದ ಹಲವಾರು ವರ್ಷಗಳಿಂದ ಅವರೇನು ಮಾಡಿದ್ದಾರೆ ಎಂಬುದಕ್ಕೆ ಅವರಲ್ಲಿ ಉತ್ತರವಿರಲಿಲ್ಲ."

ಮೆಡಿಕೊಡಾ ಹಳ್ಳಿಯ ಮಾಯಾ ವಾಂಕಡೆ ಹೇಳುತ್ತಾರೆ, : "ಮೊದಲಿದ್ದ ಸರಪಂಚ್ ಅಧಿಕಾರ ಬಿಟ್ಟು ಕೊಡುವುದಕ್ಕೆ ಸಿದ್ಧನಿರಲಿಲ್ಲ. ಒಂದು ಪಕ್ಷ 'ವಿಮೆನ್ಸ್ ಪ್ಯಾನಲ್' ಆಯ್ಕೆಯಾದರೆ ತಾವೇ ಅಧಿಕಾರ ನಡೆಸುವುದಾಗಿಯೂ ಸಹ ಅವರು ಹೇಳಿಕೆ ನೀಡಿದ್ದರು."

ಇರಾನ್‌ಗೋನ್ ಹಳ್ಳಿಯ ಸರಪಂಚನ ವರ್ತನೆ ಇನ್ನೂ ಖಂಡನೀಯವಾಗಿತ್ತು. "ನಾವು ಆಯ್ಕೆಯಾದ ನಂತರವೂ ನಾಲ್ಕು ತಿಂಗಳು ಕಾಲ ಆತ ಅಧಿಕಾರ ಬಿಟ್ಟು ಕೊಲಿಲ್ಲ. ಆತನೇ ಒಂದು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಿದ್ದನು. ಆತ ನಮಗೊಂದು ಮಡಿಕೆಯಲ್ಲಿ ಸಗಣಿ ಕೊಟ್ಟು ಇದನ್ನು ನೀವು ಬಳಸಿರಿ ಎಂದು ಹೇಳಿದನಲ್ಲದೇ, ಇದಕ್ಕೇ ನೀವು ಲಾಯಕ್ ಎಂದು ಕೂಡಾ ಹೀಯಾಳಿಸಿದ್ದ." ಹೀಗೆಂದು ಅಭಿಪ್ರಾಯ ಪಟ್ಟವರು ಸರಪಂಚ್ ಆಗಿ ಆಯ್ಕೆಯಾದ ಅಂಜನಾ ಬಾಯಿ ಟೊರಾಯಿ, ಆಕೆ ನಿರಕ್ಷರಸ್ಥೆ ಎಂಬ ಕಾರಣಕ್ಕಾಗಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಒಬ್ಬ ಆಕೆಯ ಕೂಡಾ ಕೆಲಸ ಮಾಡಲು ನಿರಾಕರಿಸಿದ. "ಅವರು ಅನಕ್ಷರಸ್ಥನ ಗಂಡಸರೊಂದಿಗೆ ಕೆಲಸ ಮಾಡುತ್ತಾರೆ, ಆದರೆ ನಮ್ಮೊಂದಿಗಲ್ಲ."

ಪಂಚಾಯತಿಗೆ ಆಯ್ಕೆಯಾದ ಈ ಮಹಿಳೆಯರು ತೆಗೆದುಕೊಂಡ ಮುಖ್ಯ ಸಮಸ್ಯೆಗಳೆಂದರೆ ಸಾರಾಯಿ ಅಂಗಡಿಗಳ ಮುಚ್ಚಿಸುವುದು, ಹೆಂಗಸರ ಕೆಲಸದ ಅವಧಿಯನ್ನು ಕಡಿಮೆ ಮಾಡುವುದಕ್ಕೋಸ್ಕರ 240 ಮನೆಗಳಿರುವ ಹಳ್ಳಿಯಲ್ಲಿ 90 ನಲ್ಲಿಗಳೂ ಹಾಗೂ 24 ಗೋಬರ್ ಗ್ಯಾಸ್‌ಗಳನ್ನು ಹಾಕಿಸಿದರು.

ಪ್ರಮೀಳಾ ಜಾವೇದ್ ಒಬ್ಬ ಪಂಚಾಯತಿಯ ಸದಸ್ಯೆ ಹೀಗೆಹೇಳುತ್ತಾರೆ, "ನಮ್ಮೆಲ್ಲರ ಮೊದಲ ಗುರಿಯೆಂದರೆ ಮಹಿಳಾ ಜಾಗೃತಿ ಹಾಗೂ ಅಭಿವೃದ್ಧಿಗಾಗಿ ಕೆಲಸ ಮಾಡುವುದು. ಎಷ್ಟೆಲ್ಲ ಮಿತಿಗಳನ್ನೂ ಮೀರಿ ನಾವು ಈ ದಿಕ್ಕಿನತ್ತ ಪ್ರಯಾಣಿಸಿದ್ದೇವೆ."

ಮಹಿಳಾ ಶೌಚಾಲಯಗಳು, ಸಾರಾಯಿ ಅಂಗಡಿಗಳ ಮುಚ್ಚುವಿಕೆ, ಹೆಂಗಸರ ಹೆಸರಿಗೆ ಭೂಮಿ ದಕ್ಕುವಂತೆ ಮಾಡುವುದು, ಶಿಕ್ಷಕಿಯರ ನೇಮಕಾತಿ, ಮಹಿಳೆಯರ ಕೆಲಸದ ಹೊರೆ ಕಡಿಮೆ ಮಾಡಲು–ನೀರು, ಸೌದೆ,ಗ್ಯಾಸ್‌ಗಳ ಸೌಲಭ್ಯ ಹೆಚ್ಚಿಸುವುದು-ಇಂತಹ ಸಮಸ್ಯೆಗಳಿಗೆ ಹೆಚ್ಚು ಒತ್ತು ನೀಡಿದುದರಿಂದ ಗ್ರಾಮದಲ್ಲಿನ ಮಹಿಳೆಯರ ವಿಶ್ವಾಸ ಗಳಿಸುವಲ್ಲಿ ಈ ಮಹಿಳೆಯರು ಸಫಲರಾಗಿದ್ದಾರೆ.

ಮತದಾನ ರಾಜಕೀಯ ಕುರಿತಂತೆ ಮಹಿಳಾ ಚಳುವಳಿ ಇಲ್ಲಿಯವರೆಗೆ ಒಂದು ನಿರ್ಲಿಪ್ತ ಧೋರಣೆಯನ್ನೇ ಹೊಂದಿತ್ತು. ಈಗ ನೀಡಿರುವ 30./. ಮೀಸಲಾತಿಯಿಂದಾಗಿ ಮಹಿಳಾ ಚಳುವಳಿ ಈ ಬಗ್ಗೆ ಆಸಕ್ತಿ ವಹಿಸ ತೊಡಗಿದೆ. ಪೂನಾದಲ್ಲಂತೂ ಈ ಮಾತು ಹೆಚ್ಚು ಪ್ರಸ್ತುತವಾಗಿದೆ. 'ರಾಜಕೀಯ ಹೊಲಸು' ಎಂಬುದು ನಾವೆಲ್ಲರೂ ಬಲ್ಲ ಸತ್ಯ. ಆದರೆ ಅಧಿಕಾರದಿಂದ ದೂರ ವಿದ್ದು, ವ್ಯವಸ್ಥೆಯಿಂದ ಹೊರಗಿದ್ದು ಈ ವ್ಯವಸ್ಥೆಯನ್ನು ಬದಲಾಯಿಸಲು ಸಾಧ್ಯವೇ ಎಂದು ನಾವೆಲ್ಲರೂ ಯೋಚಿಸ ಬೇಕಾಗುತ್ತದೆ.

ಪೂನಾದಲ್ಲಿ ಕ್ರಾಂತಿಕಾರಿ ಮಹಿಳಾ ಸಂಘಟನೆ ಒಂದು ಸ್ವಾಯತ್ತ ಮಹಿಳಾ ಸಂಸ್ಥೆ. 80ರ ಪ್ರಾರಂಭದಲ್ಲಿ ಈ ಮಹಿಳಾ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಪುಣೆಯಲ್ಲಿ ಇದರ ಅನೇಕ ಶಾಖೆಗಳಿವೆ. ಇದು ಎರಡು ಮೂರು ರೀತಿಯಲ್ಲಿ ಮತ ಚುನಾವಣೆಯಲ್ಲಿ ಭಾಗವಹಿಸುತ್ತದೆ. ಗ್ರಾಮಪಂಚಾಯತಿ, ಜಿಲ್ಲಾ ಪರಿಷತ್ ಹಾಗೂ ಈಗ ಮುನ್ಸಿಪಲ್ ಕಾರ್ಪೋರೇಷನ್‌ನಲ್ಲಿ ಕೂಡಾ ಸ್ಪರ್ಧಿಸಿದೆ. ಕೆಲವು ಸಲ ಸ್ವತಂತ್ರವಾಗಿ ಸಂಘಟನೆಯಿಂದ ಸ್ಪರ್ಧಿಸಿದರೆ ಇನ್ನು ಕೆಲವು ಸಲ ರಾಜಕೀಯ ಪಕ್ಷದೊಡನೆ ಒಪ್ಪಂದ ಮಾಡಿಕೊಂಡು ಸ್ಪರ್ಧಿಸಿದೆ. ಈ ಬಗ್ಗೆ ಬೀದಿ ನಾಟಕ, ಮಹಿಳೆಯರ ರಾಜಕೀಯ ಹಕ್ಕುಗಳು ಹಾಗೂ ಅವರ ಸಮಸ್ಯೆಗಳ ಕುರಿತಂತೆ ಪೋಸ್ಟರ್ ಪ್ರದರ್ಶನ ಮಾಡುವುದು, ಚುನಾವಣೆ ಪ್ರಚಾರ ಮಾಡುವಾಗ ಮಹಿಳೆಯರಿಗೆ ಯೋಚಿಸಿ ಮತ ನೀಡುವಂತೆ ಒತ್ತಾಯಿಸುವುದು ಇತ್ಯಾದಿ ತಂತ್ರಗಳನ್ನು ಇವರು ಬಳಸುತ್ತಾರೆ. ಇವರು ಒಂದು ಮಹಿಳಾ ಮ್ಯಾನಿಫ್ಯಾಸ್ಟೋ ತಯಾರಿಸಿದ್ದಾರೆ. ಇದು ಜೆಂಡರ್ ಸ್ಪೆಸಿಫಿಕ್ ಆಗಿದ್ದು-ಮಹಿಳೆಯರ ಮೇಲೆ ನಡೆಯುವ ಹಿಂಸೆ, ಅವರ ಆರೋಗ್ಯ, ಸಮಾನ ವೇತನ, ನೀರಿನ ಸೌಲಭ್ಯ ಸ್ಕೂಲಿನ ಸೌಲಭ್ಯ ಇತ್ಯಾದಿಗಳನ್ನು ಒಳಗೊಂಡಿದೆ.

ಕೆ. ಎಮ್. ಎಸ್. ರಾಜಕೀಯವನ್ನು 'ಹೊಲಸು' ಎಂದು ಪರಿಗಣಿಸುವುದಿಲ್ಲ. ಮಹಿಳೆಯರನ್ನು ಸಶಕ್ತರನ್ನಾಗಿಸಲು, ಅವರ ಜೀವನ ಮಟ್ಟವನ್ನು ಎತ್ತರಿಸುವಲ್ಲಿ ಇವುಗಳನ್ನು ಒಂದು ಹಾದಿ ಎಂಬುದಾಗಿ ಯೋಚಿಸುತ್ತಾರೆ.

'ನಾರಿ ಸಮಾಜ ಮಂಚ'—ಪುಣೆಯ ಇನ್ನೊಂದು ಸಂಘಟನೆ. ಇವರೂ ಕೂಡಾ ಮತದಾನ ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಬಗ್ಗೆ ಆಸಕ್ತಿ ವಹಿಸಿದ್ದಾರೆ.

ಇಡಿಯ ಜನಸಂಖ್ಯೆಯಲ್ಲಿರುವ ಮಹಿಳೆಯರಿಗೆ ಹೋಲಿಸಿದರೆ ಮತದಾನ ರಾಜಕೀಯದ ಅಂಗಗಳಲ್ಲಿ ಇರುವ ಮಹಿಳೆಯರ ಸಂಖ್ಯೆ ಕಡಿಮೆಯೇ. ಪಂಚಾಯತಿಯಲ್ಲಿರುವ ಮಹಿಳೆಯರೂ ಪ್ರಾಧಾನ್ಯತೆ ಹೊಂದಿರುವ ಜಾತಿ ಹಾಗೂ ವರ್ಗಕ್ಕೆ ಸೇರಿದವರಾಗಿರುತ್ತಾರೆ. ನಿರ್ಧಾರದ ಹಂತದಲ್ಲಿ ಇವರು ಮುಖ್ಯ ಪಾತ್ರ ವಹಿಸುವುದೇ ಇಲ್ಲ. ಲಿಂಗಾಧಾರಿತ ಸಮಸ್ಯೆಗಳನ್ನೂ ಸಹ ಇವರು ಪ್ರತಿನಿಧಿಸುವುದಿಲ್ಲ. ಏಕೆಂದರೆ ಆಯ್ಕೆಯಾಗಿರುವವರು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇರುತ್ತಾರೆ. ಉಳಿದಿರುವವರು ಸಂಬಂಧಿಗಳಾದ ರಾಜಕಾರಣಿಗಳ್ಯಾರಿಂದಲೋ ನೇಮಕ ಮಾಡಲ್ಪಟ್ಟಿರುತ್ತಾರೆ. ಅವರು ಕೇವಲ ರಬ್ಬರ್ ಸ್ಟ್ಯಾಂಪ್‌ಗಳಾಗಿ ಮಾತ್ರ ಕೆಲಸ ಮಾಡುತ್ತಾರೆ.


ರಾಜಕೀಯ ಪಕ್ಷಗಳೂ ಕೂಡಾ ಚುನಾವಣಾ ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು ಅಷ್ಟಾಗಿ ಕಂಡುಬರುವುದಿಲ್ಲ. ಎಲ್ಲಾ ರಾಜಕೀಯ ಪಕ್ಷಗಳೂ ಪುರುಷರಿಂದ ಪ್ರಾಧಾನ್ಯತೆ ಹೊಂದಲ್ಪಟ್ಟಿವೆ. ಅವರು 'ಮಾಸ್ ಬೇಸ್' ಆಗಿ ಮಹಿಳೆಯರನ್ನು ಬಳಸುವುದೇ ಇಲ್ಲ, 'ಓಟಿನ ಬ್ಯಾಂಕ್ಸ್' ಎಂದು ಅವರನ್ನು ಎಣಿಸುವುದೇ ಇಲ್ಲ. ಪಕ್ಷಗಳ ಒಳಗೆ ಕೆಲಸ ಮಾಡುವ ಮಹಿಳೆಯರು ಹೆಂಗಸರನ್ನು ಸಂಘಟಿಸುವಲ್ಲಿ ಮುಖ್ಯ ಪಾತ್ರ ವಹಿಸಿರುತ್ತಾರೆ–ಅದು ಬೆಲೆ ಏರಿಕೆಯ ವಿರುದ್ಧ ಆಗಿರಬಹುದು ಅಥವಾ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟುವುದಕ್ಕಾಗಿರಬಹುದು.

ಆದರೆ ನಿರ್ಧಾರದ ಹಂತಗಳಲ್ಲಿ, ಹೆಂಗಸರೊಡನೆ ಅಧಿಕಾರ ಹಂಚಿಕೊಳ್ಳುವಂತಹ ಸಂದರ್ಭ ಬಂದಾಗ ಹೆಂಗಸರನ್ನು ಹೊರಗಡೆ ಇಡಲು ಇವರು ಪ್ರಯತ್ನಿಸುತ್ತಾರೆ.

ಇದರಿಂದ ನಾವು ನಿರಾಶರಾಗಬೇಕಿಲ್ಲ. ಈಗ ನಮಗೆ ಒಂದು ಆಶಾಕಿರಣ ಇದೆ. ಗ್ರಾಮಪಂಚಾಯತಿ ಹಂತದಿಂದ ಹೆಂಗಸರು ಈಗ ಜಾತಿ, ವರ್ಗ ಹಾಗೂ ಲಿಂಗಾಧಾರಿತ ಸಮಸ್ಯೆಗಳನ್ನು ಹೋರಾಡಲು ಪ್ರಯತ್ನಿಸುತ್ತಿದ್ದಾರೆ. ಇದು ಸ್ವಾಗತಾರ್ಹ. ಮಹಿಳೆಯರಲ್ಲಿ ಒಗ್ಗಟ್ಟು ಇರಬೇಕಾಗಿದೆ. ಬಡ ರೈತ ಹಾಗೂ ಜಾತಿ ಮಹಿಳೆಯರ ಸಮಸ್ಯೆಗಳನ್ನು ಹೆಚ್ಚು ಹೆಚ್ಚಾಗಿ ಬೆಳಕಿಗೆ ತರುವುದರ ಮೂಲಕ ಈ ಮಹಿಳೆಯರು ಒಗ್ಗಟ್ಟಿಗಾಗಿ ಶ್ರಮಿಸಬೇಕಾಗಿದೆ. ಇಂಡೋಲಿ, ಪಾಲ್ಸಿ, ಕುರಂಗಿಯ ಪಂಚಾಯತಿಗೆ ಆಯ್ಕೆಯಾದ ಮಹಿಳೆಯರು ಮಹಾರಾಷ್ಟ್ರದ ಮಹಿಳೆಯರಿಗೆ ಮಾತ್ರವಲ್ಲ, ಇಡೀ ದೇಶದ ಮಹಿಳೆಯರಿಗೇ ಸ್ಫೂರ್ತಿಯಾಗಬೇಕಿದೆ. ಇಡಿಯ ವ್ಯವಸ್ಥೆಯನ್ನು ಸವಾಲು ಮಾಡುವಲ್ಲಿ, ಮತದಾನ ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದಕ್ಕೆ ತಂತ್ರೋಪಾಯ ಬೆಳೆಸುವಲ್ಲಿ ಮಹಿಳಾ ಸಂಘಟನೆಗಳು, ಸಾಮಾಜಿಕ ಸಂಘಟನೆಗಳು ಮಹಾರಾಷ್ಟ್ರದ ಈ ಹೆಂಗಸರ ಅನುಭವಗಳಿಂದ ಕಲಿಯಬೇಕಾಗಿದೆ.

Participation of women in Electoral Politics in Maharastra

('ಆಲೋಚನಾ'— ಸೆಂಟರ್ ಫಾರ್ ಡಾಕ್ಯುಮೆಂಟೇಶನ್ ಆ್ಯಂಡ್ ರೀಸರ್ಚ್ ಆನ್ ವಿಮೆನ್ - ಪೂನ ಇವರ ಮೇಲಿನ ಲೇಖನದಿಂದ ಆಯ್ದ ಭಾಗಗಳನ್ನು ಅನುವಾದಿಸಿ ಪ್ರಕಟಿಸಲಾಗಿದೆ.



ಗುಲಾಬಿ ಗಮಲು

ಅಂದು,
ನೀ ನೀಡಿದ ಗುಲಾಬಿ
ಇನ್ನೂ ಜೋಪಾನ
ಡೈರಿಯ
ಪುಟದೊಳಗೆ
ಪುಟತೆಗೆದರೆ
ಗಮಲು !
ಎಷ್ಟಾಗಲಿ
ಪನ್ನೀರ ಗುಲಾಬಿ ;
ಪಕ್ಕದಲ್ಲೇ
ನಾಗೀಚಿದ
ಕವನದ
ಸಾಲೊಳಗೆ
ನೀ
ಸುಳಿದಾಡಿ
ಕಚಗುಳಿ

ಯಾಕೋ
ಗಮಲೊಳಗೆ
ನಿನ್ನ
ವಾಸನೆಯೆ ಬರದು
ಮೂಸಿದಷ್ಟು
ಮರೆಯಾಗಿದೆ
ನೀ
ನನ್ನ ಮರೆತೆ
ನಾ
ನಿನ್ನ ಗಮಲು ಮರೆತೆ
ಉಳಿದದ್ದು
ಡೈರಿಯೊಳಗೆ
ಅಪ್ಪಚ್ಚಿಯಾದ
ಗುಲಾಬಿ
ಗಮಲು
ಕವನದ ಸಾಲು
ಅದರಲಿ
ನನ್ನ ಪಾಲೆಷ್ಟೋ
ನಿನ್ನ ಪಾಲೆಷ್ಟೋ
ಲೆಕ್ಕ
ಹಾಕಲಾರೆ

● **ಸರಸ್ವತಿ ದು.**

"ಕಣ್ಣು ಕಾಣದ ಗಾವಿಲರು"

ನಾಲ್ಕು ಗೋಡೆಗಳ ಮಧ್ಯ
ಬಂಧಿ!
ಸೂರ್ಯನ ಒಂದೇ ಒಂದು
ಕಿರಣಕ್ಕಾಗಿ ಹಾತೊರೆಯುವೆ
ಶೂನ್ಯದಲ್ಲೂ ಸಂಗೀತಮಯ
ಮುತ್ತಿಕ್ಕುವ ಝೇಂಕಾರ
ಗುಂಯ್ ಗುಡುವ ಸೊಳ್ಳೆಯ ಸ್ವರ
ಕೈ ಇಕ್ಕಿದಲ್ಲಿ ತಾಕುತ್ತದೆ.
ಆಸರೆಗಾಗಿ ಹಿಡಿದೇಳಲು
ಅವೇ ಅವೇ ಜಾಡಪ್ಪ ಬಲೆಗಳು
ಕಿತ್ತು ಬರುತ್ತಿವೆ
ದೈಹಿಕ ಬಾಯಾರಿಕೆ–ಬಳಲಿಕೆ
ಯಾವುದೂ ಇಲ್ಲ
ಚೇತನ ರಹಿತ ಮಾನಸಿಕ ಸ್ವಸ್ತ್ಯ
ಕಣ್ಣು ಕಾಣದ ಇವರು !
ಸ್ವಾತಂತ್ರ್ಯವನ್ನೇ ದೋಚಿದ್ದಾರೆ
ಹೊರಗಿದ್ದರೂ ಇರಲಾಗದ ಸ್ಥಿತಿ
ಬಿಡುಗಡೆ ಬೇಡವೇ ಬೇಡ
ಸೊಳ್ಳೆ ಜಾಡಪ್ಪಗಳೇ ಮೇಲು
ಈ ಗಾವಿಲರಿಗಿಂತ.

● **ಶ್ರೀಮತಿ ನಿಃಶಾಂತಿನಿ ಸೂಡಿ**

ಸ್ತ್ರೀಯರ ಸಶಕ್ತತೆಗಾಗಿ ಶಿಕ್ಷಣ - ಕೆಲವು ಚಿಂತನೆಗಳು

(Education for Women's Empowerment)

● ಕಮಲಾ ಭಾಸಿನ್

ಈ ದಿನಗಳಲ್ಲಿ ಪ್ರತಿಯೊಬ್ಬರೂ ಮಹಿಳೆಯ ಸಶಕ್ತತೆಯ ಬಗ್ಗೆ ಮಾತನಾಡುತ್ತಿದ್ದಾರೆ. ಮಹಿಳೆಯರು, ಪುರುಷರು, ಸರ್ಕಾರಗಳು, ಸರ್ಕಾರೇತರ ಸ್ವಯಂ ಸೇವಾ-ಸಂಸ್ಥೆಗಳು ಅಲ್ಲದೇ ವರ್ಲ್ಡ್ ಬ್ಯಾಂಕ್ ಕೂಡಾ ಮಹಿಳೆಯರ ಸಶಕ್ತತೆಯ ಬಗ್ಗೆ ಇಂದು ಮಾತನಾಡತೊಡಗಿದೆ. ಈ ಪ್ರಚಾರದ ನಡುವೆಯೇ ಇವೆಲ್ಲದರ ಬಗ್ಗೆ ನಾವು ಗಂಭೀರವಾಗಿ ಆಲೋಚಿಸಬೇಕಾಗಿದೆ. ಏಕೆಂದರೆ ಒಮ್ಮೆ ಇದರೊಳಗೆ ನೀವಿದ್ದೀರಿ ಎಂದರೆ ಇಲ್ಲಿನ ವೇಗ ಅಥವಾ ದಿಕ್ಕನ್ನು ಕುರಿತು ನೀವು ನಿರ್ಧರಿಸಲಾರಿರಿ. ಎರಡು ಕಾರಣಗಳಿಂದಾಗಿ ಈ ಮಾತನ್ನು ನಾನು ಹೇಳುತ್ತಿದ್ದೇನೆ.

ನಮ್ಮ ಸಮಾಜದ ಎಲ್ಲಾ ಸಂಸ್ಥೆಗಳೂ ಪಿರಮಿಡ್ಸ್ ತರಹದ ರಚನೆಯನ್ನು ಹೊಂದಿವೆ. ಕೆಲವೇ ಮಂದಿ ಸಂಪನ್ಮೂಲಗಳನ್ನ, ನಿರ್ಧರಿಸುವ ಹಕ್ಕುಗಳನ್ನು ಅಸಮಾನವಾಗಿ ಹಂಚಿಕೊಂಡಿದ್ದಾರೆ. ಎಲ್ಲಾ ಶ್ರೇಣೀಕೃತ ಹಾಗೂ ಪಿರಮಿಡ್ಸ್ ರಚನೆಗಳ ಸಮಾಜದ ಅತ್ಯಂತ ಕೆಳಭಾಗದಲ್ಲಿ ಹೆಂಗಸರಿದ್ದಾರೆ. ಒಮ್ಮೆ ಮಹಿಳೆಯರು ಸಶಕ್ತರಾದರೆ, ಪ್ರಶ್ನಿಸುವ, ಎಲ್ಲವನ್ನೂ ಅಲುಗಾಡಿಸುವಂತಹ ಸಾಮರ್ಥ್ಯ ಹೊಂದುವಂತಾದರೆ ಸಮಾಜದ ಎಲ್ಲಾ ಪಿರಮಿಡ್ಸ್ ಹಾಗೂ ಶ್ರೇಣೀಕೃತ ವ್ಯವಸ್ಥೆಗಳೂ ಕುಸಿಯುತ್ತವೆ. ಎಲ್ಲಾ ಸಂಸ್ಥೆಗಳ ರಚನೆಗಳ ಬಗ್ಗೆ ಅತ್ಯಂತ ನೋವಿನ ಪ್ರಶ್ನೆಗಳು ಅಲ್ಲಿ ಹುಟ್ಟಿಕೊಳ್ಳುತ್ತವೆ. ನಾವು ಕೆಲಸ ಮಾಡುವ ಸಂಸ್ಥೆಗಳು ಹಾಗೂ ನಾವು ಬದುಕುತ್ತಿರುವ ಕುಟುಂಬಗಳಲ್ಲೂ ಸಹ ಇಂತಹ ನೋವಿನ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ಸ್ತ್ರೀವಾದಿಗಳು ವೈಯಕ್ತಿಕವೆಂಬುದು ರಾಜಕೀಯವಾಗಿರುತ್ತದೆ ಎಂಬ ಘೋಷಣೆಯನ್ನು ಮಾಡಿದ್ದಾರೆ. (personal is political) ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮೆಲ್ಲರ ವ್ಯಾಖ್ಯಾನಗಳಿಂದ ಅಲ್ಲ, ನಮ್ಮೆಲ್ಲರ ವೈಯಕ್ತಿಕ ನಡತೆ ಹಾಗೂ ಮನೋಭಾವಗಳಿಂದ ಅಳೆಯಲ್ಪಡುತ್ತೇವೆ. ಮಹಿಳೆಯರ ಸಶಕ್ತತೆಯ ಬಗ್ಗೆ ಮಾತನಾಡುವುದೆಂದರೆ ನಮ್ಮಿಂದಲೇ ಪ್ರಾರಂಭಿಸುವ, ನಮ್ಮನ್ನೇ ವಿಮರ್ಶಾತ್ಮಕವಾಗಿ ನೋಡಿಕೊಳ್ಳುವ ಹಂತ. ಇದು ಮಹಿಳೆ ಹಾಗೂ ಪುರುಷ ಇಬ್ಬರಿಗೂ ಅತ್ಯಂತ ನೋವಿನ ಹಂತ. ಆದರೆ ಸಮಾನತೆಯನ್ನು ಬಯಸುವುದೇ ಆದರೆ ಈ ನೋವಿನ ಹಂತವನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಮಹಿಳೆಯರು ಭಾಷೆಯ ಬಗ್ಗೆ ಪ್ರಶ್ನಿಸುವುದನ್ನೂ ನಾವು ಈಗ ಕಾಣಬಹುದು. ಉದಾಹರಣೆಗೆ ಮ್ಯಾನ್, ಮ್ಯಾನ್‌ಕೈಂಡ್, ಬ್ರದರ್‌ಹುಡ್ ಇಂತಹ ಪದಗಳ ಬಳಕೆಯನ್ನು ವಿರೋಧಿಸುವುದನ್ನು ನಾವು ಕಾಣಬಹುದು.

ಮಹಿಳೆಯರ ಸಶಕ್ತತೆಯ ಕುರಿತು ನಾವು ಮಾತನಾಡುವಾಗ ನಾವು ಸ್ತ್ರೀವಾದಿ ಆಲೋಚನೆ ಹಾಗೂ ವಿಚಾರಧಾರೆಯ ಸ್ವಾಧಿಕಾರವನ್ನೂ ಕುರಿತು ಮಾತನಾಡಬೇಕೆಂದು ನನಗೆ ಅನಿಸುತ್ತದೆ. ಹಾಗೆಂದ ಮಾತ್ರಕ್ಕೆ ನಾವು ಎಲ್ಲಾ ಬಗೆಯ ಹೆಂಗಸರನ್ನು, ಅವರೆಲ್ಲಾ ವಿಚಾರಧಾರೆಗಳನ್ನು ಉತ್ತೇಜಿಸಲಾಗುವುದಿಲ್ಲ. ಮಹಿಳಾ ಸರ್ವಾಧಿಕಾರಿಗಳನ್ನು, ಪಿತೃ ಪ್ರಧಾನ ಮೌಲ್ಯ ಹೊಂದಿದ ಮಹಿಳೆಯರನ್ನು—ಅವರು ಮಹಿಳೆಯರು ಎಂಬ ಕಾರಣಕ್ಕಾಗಿಯೇ ಅವರನ್ನು ನಾವು ಸಮರ್ಥಿಸುವುದಿಲ್ಲ. ಮಹಿಳೆಯರೂ ಸಹ ಪಿತೃಪ್ರಧಾನ ಮೌಲ್ಯ ರೂಢಿಸಿಕೊಂಡಿದ್ದಾರೆ, ಶೋಷಿಸುತ್ತಾರೆ. ಎಂಬುದನ್ನು ನಾವು ಗುರುತಿಸುತ್ತೇವೆ. ಪಿತೃಪ್ರಧಾನತೆಯನ್ನು ಹೋರಾಡುವಲ್ಲಿ ಕೆಲವು ಪುರುಷರು ನಮ್ಮ ಸಹವರ್ತಿಗಳಾಗಿದ್ದಾರೆ, ಆಗುತ್ತಾರೆ ಎಂಬುದೂ ನಮಗೆ ತಿಳಿದಿದೆ. ನಮ್ಮ ಹೋರಾಟ ಸಮಾನತೆ, ನ್ಯಾಯ, ಪ್ರಜಾಪ್ರಭುತ್ವದಂತಹ ಮೌಲ್ಯಗಳಿಗಾಗಿ.

ಮಹಿಳಾ ದೃಷ್ಟಿಕೋನ ಸಶಕ್ತಗೊಳ್ಳಬೇಕು. ಏಕೆಂದರೆ ಮಹಿಳೆಯರು ಪ್ರತ್ಯೇಕ ವಿಭಾಗಗಳಲ್ಲಿ ಮಹಿಳೆಯರ ಕಾಳಜಿಗಳು, ದೃಷ್ಟಿಕೋನಗಳು, ವಿಷನ್ ಇವು ಪ್ರತಿಯೊಂದು ವಿಚಾರದಲ್ಲಿಯೂ ಇಂದು ಅಗತ್ಯವಾಗಿವೆ. ಅದು ಸೈನ್ಯಾಧಿಕಾರವಿರಬಹುದು. ಮಾನವ ಹಕ್ಕುಗಳ ಸಂರಕ್ಷಣೆಯಾಗಿರಬಹುದು ಅಥವಾ

ಜೀವನಾಧಾರಿತ ಅಭಿವೃದ್ಧಿಯಾಗಿರಬಹುದು–ಪ್ರತಿಯೊಂದು ವಿಚಾರವೂ ಮಹಿಳೆಯರಿಗೆ ಸಂಬಂಧಪಟ್ಟ ವಿಚಾರವೇ ಆಗಿರುತ್ತದೆ.

ಇಂದು ನಾವು ಮಹಿಳೆಯರಿಗೆ ಸಶಕ್ತತೆ ನೀಡುವ ಶಿಕ್ಷಣದ ಬಗ್ಗೆ ಮಾತನಾಡುತ್ತಿದ್ದೇವೆ. ಮೊದಲನೆಯದಾಗಿ ನಾವು ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಶಿಕ್ಷಣ ಹಾಗೂ ಜ್ಞಾನ ಐತಿಹಾಸಿಕವಾಗಿ ಮಹಿಳೆಯರಿಗೆ ಏನು ಮಾಡಿದ್ದಾವೆ ಎಂಬುದನ್ನು ವಿಶ್ಲೇಷಿಸುವುದು ನಮಗೆ ಅಗತ್ಯವಾಗುತ್ತದೆ.

ಅಧಿಕೃತ ಶಿಕ್ಷಣ ಹಾಗೂ ಜ್ಞಾನಗಳು ಮಹಿಳೆಯರನ್ನು ಗೌಣವಾಗಿಸಿವೆ ಹಾಗೂ ಅಶಕ್ತತೆಗೊಳಿಸಿವೆ.

ಮಾನವ ಕುಲದ ಆರಂಭದಲ್ಲಿ ಸ್ತ್ರೀ/ಪುರುಷ ಇಬ್ಬರೂ ಜ್ಞಾನವನ್ನು ಸೃಷ್ಟಿಸಿದರು. ಸ್ತ್ರೀವಾದಿಗಳು ಮತ್ತು ಇತರ ಮಾನವ ಶಾಸ್ತ್ರಜ್ಞರು ಸ್ತ್ರೀಯರು ವ್ಯವಸಾಯವನ್ನು ಸಂಶೋಧಿಸಿದುದಾಗಿ, ಕೆಲವು ಬೆಳೆಗಳನ್ನು ಮೊದಲು ಅವರೇ ಬೆಳೆದುದಾಗಿ, ಪ್ರಥಮದಲ್ಲಿ ಚಿಕಿತ್ಸಾಕಾರರಾಗಿದ್ದ ಮಹಿಳೆಯರು ಕೆಲವು ಔಷಧಿಗಳನ್ನು ಕಂಡುಹಿಡಿದುದಾಗಿ ಅಭಿಪ್ರಾಯಪಡುತ್ತಾರೆ.

ಆದರೆ ಇತ್ತೀಚಿನ 2000/3000 ವರ್ಷಗಳಲ್ಲಿ ಜ್ಞಾನದ ದೃಷ್ಟಿ ಒಂದು ಪ್ರತ್ಯೇಕ ಹಾಗೂ ಅಧಿಕೃತ ಚಟುವಟಿಕೆ ಯಾದಾಗಿನಿಂದ ವಿಶ್ರಾಂತ ವರ್ಗದ ಜನರು ಈ ಜ್ಞಾನದ ಮೇಲೆ ಪೂರ್ಣವಾದ ಹಿಡಿತವನ್ನು ಸ್ಥಾಪಿಸಿದರು. ಕಲಿಯುವಿಕೆ, ಶಿಕ್ಷಣ, ಮತ್ತು ಜ್ಞಾನದ ಸೃಷ್ಟಿ ಇವು ಮೇಲ್ವರ್ಗದ ಪುರುಷರ ಸ್ವತ್ತಾಗತೊಡಗಿದವು. ಜೊತೆಗೆ ಪಾಶ್ಚಿಮಾತ್ಯ ವಿಜ್ಞಾನ ಹಾಗೂ ಜ್ಞಾನಗಳು ಇತರೇ ಸಂಸ್ಕೃತಿಯ ವಿಜ್ಞಾನ ಮತ್ತು ಜ್ಞಾನ ವ್ಯವಸ್ಥೆಗಳ ಮೇಲೆ ಅಧಿಕಾರ ಸ್ಥಾಪಿಸತೊಡಗಿದವು.

ಹೀಗೆ ವಿದ್ಯಾವಂತರೆನಿಸಿಕೊಂಡ ಪುರುಷರು ಅಧಿಕೃತವಾಗಿ ವ್ಯವಸ್ಥಾಪಕವಾದ ಆಧುನಿಕ ಧರ್ಮಗಳನ್ನು ಸೃಷ್ಟಿಸಿದರು. ಈ ಧರ್ಮಗಳು ಸ್ತ್ರೀವಾದಿ ತತ್ವದ ಅಧಿಕಾರವನ್ನು ಕೆಳಗುರುಳಿಸಿದವು, ದೇವತೆಗಳನ್ನು ಕೆಳಗುರುಳಿಸಿ ಆ ಸ್ಥಾನದಲ್ಲಿ ಪುರುಷ ದೇವರುಗಳನ್ನು ಸ್ಥಾಪಿಸಿದವು. ಆದ್ದರಿಂದ ಆಧುನಿಕ ಧರ್ಮಗಳಲ್ಲಿ ಪಿತೃ-ಪ್ರಾಧಾನ್ಯತೆ ಕಂಡುಬರುತ್ತದೆ. ಇವು ಪುರುಷನನ್ನು ಶ್ರೇಷ್ಠ, ನಾಯಕ, ಸ್ವಾಮಿ, ಪತಿ, ಗಂಡ ಎನ್ನುವ ರೀತಿಯಲ್ಲಿ ವ್ಯಾಖ್ಯಾನಿಸುತ್ತವೆ. ಇವು ಸ್ತ್ರೀಯರನ್ನು ಧಾರ್ಮಿಕ ಅಧಿಕಾರದಿಂದ ಹಾಗೂ ಧಾರ್ಮಿಕ ಆಸಕ್ತಿಗಳಿಂದ ವಿಮುಖಗೊಳಿಸಿವೆ.

ಪುರುಷ ಧಾರ್ಮಿಕ ಗುರುಗಳು ನೀತಿ ಸಂಹಿತೆ ಹಾಗೂ ಕಾನೂನುಗಳನ್ನು ವ್ಯಾಖ್ಯಾನಿಸುತ್ತಾರೆ. ನಮ್ಮ ಇಂದಿನ ಕಾನೂನು ವ್ಯವಸ್ಥೆಗಳೂ ಸಹ ಧಾರ್ಮಿಕ ಕಾನೂನುಗಳ ಮೇಲೆ ಅವಲಂಬಿತವಾಗಿರುವುದರಿಂದ ಅವುಗಳಲ್ಲಿ ಇಬ್ಬಗೆಯ ದ್ವಂದ್ವ ರೀತಿಯನ್ನು ಕಾಣುತ್ತೇವೆ, ಹಾಗೂ ಹೆಂಗಸರಿಗೆ ಅನ್ಯಾಯವಾಗಿರುವುದನ್ನೂ ಗಮನಿಸುತ್ತೇವೆ.

ಶಿಕ್ಷಣವೂ ಧರ್ಮದ ಜೊತೆ ನಿಕಟ ಸಂಪರ್ಕ ಹೊಂದಿರುವುದರಿಂದ ಸ್ತ್ರೀಯರನ್ನೂ ವ್ಯವಸ್ಥಿತವಾಗಿ ಶಿಕ್ಷಣದಿಂದಲೂ ಸಹ ವಿಮುಖಗೊಳಿಸಲಾಗಿದೆ.

ಸ್ತ್ರೀವಾದಿ ಇತಿಹಾಸಕಾರರ ಪ್ರಕಾರ 15 ಮತ್ತು 17ನೆಯ ಶತಮಾನದಲ್ಲಿ ಯೂರೋಪ್‌ನಲ್ಲಿ ನಡೆಯುತ್ತಿದ್ದ 'ಮಂತ್ರವಾದಿನಿ-ಬೇಟೆ' (ವಿಚ್–ಹಂಟ್) ಸಮರ್ಥ ಸ್ತ್ರೀಯರನ್ನು ಕೊಲ್ಲಲು ಉಪಯೋಗಿಸುತ್ತಿದ್ದ ಹಿಂಸೆಗೆ ಒಂದು ಉದಾಹರಣೆಯಾಗಿದೆ. ಆ ಮಾಂತ್ರಿಕ ಹೆಂಗಸರಲ್ಲಿ ಹೆಚ್ಚಿನವರು ವೈದ್ಯಕೀಯ ಗೊತ್ತಿದ್ದ ಹೆಂಗಸರಾಗಿದ್ದರು. ಆ ಸ್ತ್ರೀಯರು ಅಧಿಕಾರ ಹಾಗೂ ಸಾಮರ್ಥ್ಯ ಹೊಂದಿದವರಾಗಿದ್ದರು.

ಧಾರ್ಮಿಕ ಪುರುಷರಷ್ಟೇ ಅಲ್ಲ, ಸೂಡೋ-ವಿಜ್ಞಾನಿಗಳೂ ಕೂಡಾ ಸ್ತ್ರೀಯು ಪುರುಷನಿಗೆ-ಅಡಿಯಾಳು ಎಂದೇ ಘೋಷಿಸಿದರು. ಕೆಲವರು ಸ್ತ್ರೀಯರು-ಪುರುಷರ ವಿಕೃತ ರೂಪ ಎಂದರು. ಇನ್ನು ಕೆಲವರು ಸ್ತ್ರೀಯರಿಗೆ ಚಿಕ್ಕ ಮೆದುಳುಗಳಿವೆ ಎಂದರು. ಗೌರವಾನ್ವಿತರಾದಂತಹ ಅರಿಸ್ಟಾಟಲ್, ಬೇಕನ್, ಫ್ರಾಯ್ಡ್ ಇನ್ನು ಇಂತಹ ಕೆಲವರೂ ಸಹ 'ಸೆಕ್ಸಿಸಂ'ನ್ನು ಎತ್ತಿಹಿಡಿಯುವಂತಹ ತಪ್ಪುಗಳನ್ನು ಮಾಡಿದ್ದಾರೆ. ಎರಡು ಉದಾಹರಣೆಗಳನ್ನು ಕೊಡಬಹುದು. ಅರಿಸ್ಟಾಟಲ್ ಪುರುಷನನ್ನು 'ಕ್ರಿಯಾಶೀಲ' ಎಂದು ಕರೆದರೆ ಸ್ತ್ರೀಯನ್ನು 'ಕ್ರಿಯಾಹೀನ' ಎಂದು ಕರೆಯುತ್ತಾನೆ. ಅವನು ಸ್ತ್ರೀಯರನ್ನು 'ಅಂಗಾಂಗ ರಹಿತ ಪುರುಷ' ಎಂದು ಕರೆಯುತ್ತಾನೆ. ಆಕೆಗೆ 'ಆತ್ಮ' ಇಲ್ಲವೆನ್ನುತ್ತಾನೆ. ಆಕೆಯ ಶಾರೀರಿಕ ಕೀಳರಿಮೆಯಿಂದಾಗಿ ಆಕೆಯ ಸಾಮರ್ಥ್ಯಗಳಲ್ಲೂ ಸಹ ಕೀಳರಿಮೆ ಇರುತ್ತದೆ. ಆಕೆ ಕಾರಣ ಹುಡುಕಲಾರಳು, ನಿರ್ಧಾರಗಳನ್ನು ತೆಗೆದುಕೊಳ್ಳುವುದು

ಆಕೆಗೆ ಸಾಧ್ಯವಾಗುವುದಿಲ್ಲ ಎನ್ನುತ್ತಾನೆ. ಹೀಗಾಗಿ ಪುರುಷ ಶ್ರೇಷ್ಠನಾಗಿರುತ್ತಾನೆ. ಸ್ತ್ರೀ ಕೀಳರಿಮೆ ಉಳ್ಳವಳಾಗಿದ್ದಾಳೆ. ಪುರುಷ ಆಳಲು, ಮಹಿಳೆ ಆಳಿಸಿಕೊಳ್ಳಲು ಹುಟ್ಟಿದ್ದಾಳೆ. ಈ ಅಗತ್ಯತೆಯ ತತ್ತ್ವ ಎಲ್ಲಾ ಮಾನವರಿಗೂ ಅನ್ವಯಿಸುತ್ತದೆ ಎನ್ನುತ್ತಾನೆ ಅವನು. ಅರಿಸ್ಟಾಟಲ್ ಹೇಳುತ್ತಾನೆ, 'ಪುರುಷನ ಧೈರ್ಯ ಆಜ್ಞಾಪಿಸುವುದರಲ್ಲಿ ತೋರಿಸಲ್ಪಟ್ಟರೆ, ಸ್ತ್ರೀಯ ಧೈರ್ಯ ಅದನ್ನು ವಿಧೇಯಳಾಗಿ ಪಾಲಿಸುವುದರಲ್ಲಿ ತೋರಿಸುತ್ತಾಳೆ.' ಇದು ಭಯಾನಕವಾದದ್ದು ಹಾಗೂ ಅಘಾತಕರವಾಗಿರುವಂತಹದು. ಎಷ್ಟು ಅವಿವೇಕದಿಂದ ಕಾರಣಗಳನ್ನು ಒಂದು 'ಕಲ್ಟ್' ಆಗಿಸಿದರು ಎಂದು ಯೋಚಿಸಿದಾಗ ಆಶ್ಚರ್ಯವಾಗುತ್ತದೆ.

ಫ್ರಾಯ್ಡನಿಗೆ ಒಬ್ಬ ಸಾಮಾನ್ಯಮಾನವನೆಂದರೆ ಅವನು ಪುರುಷ. ಸ್ತ್ರೀಯರೆಂದರೆ ಅವನ ಪ್ರಕಾರ ದಾರಿತಪ್ಪಿದ ಹಾಗೂ ಶಿಶ್ನದ ಕೊರತೆ ಇರುವ ಒಂದು ಮಾನವ ಪ್ರಾಣಿ. ಈ ಕೊರತೆಯನ್ನು ಹೋಗಲಾಡಿಸಿಕೊಳ್ಳುವ ಹೋರಾಟದಲ್ಲಿಯೇ ಆಕೆಯ ಇಡಿಯ ಮಾನಸಿಕ ಸ್ಥಿತಿ ರೂಪುಗೊಂಡಿರುತ್ತವೆ. ಸ್ತ್ರೀಯರ ಬಗ್ಗೆ ಫ್ರಾಯ್ಡ್‌ನ ಹೇಳಿಕೆಯೆಂದರೆ, "ಅನಾಟಮಿ ಈಸ್ ಡೆಸ್ಟಿನಿ'. ಇದು ಪುರುಷರ ಹಿರಿಮೆಯ ವಾದಕ್ಕೆ ಹೊಸ ಚಾಲನೆ ಹಾಗೂ ಬಲವನ್ನು ನೀಡುವಂತಹದು.

ಶಿಕ್ಷಣ ಹಾಗೂ ಜ್ಞಾನ ವ್ಯವಸ್ಥೆಗಳು ಕಾರ್ಮಿಕರನ್ನು ಮಾತ್ರವಲ್ಲ, ಸ್ತ್ರೀಯರನ್ನು ಅಧಿಕಾರದಿಂದ ನಿರ್ವಂಚನೆಗೊಳಿಸುವಲ್ಲಿ ಉಪಕರಣಗಳಾಗಿವೆ.

ಪುರುಷ ವೈದ್ಯರು ಸ್ತ್ರೀಯ ದೇಹ ಹಾಗೂ ಕಾಯಿಲೆಯ ಬಗ್ಗೆ ವ್ಯಾಖ್ಯಾನಿಸುತ್ತಾರೆ.

ಪುರುಷ ಮನಶ್ಶಾಸ್ತ್ರಜ್ಞರು ಸ್ತ್ರೀಯರ ಮನಶ್ಶಾಸ್ತ್ರದ ಬಗ್ಗೆ ವ್ಯಾಖ್ಯಾನಿಸುತ್ತಾರೆ.

ಪುರುಷ ಇತಿಹಾಸಕಾರರು 'ಅವನ' ಕತೆ ಬರೆದರೇ ಹೊರತು 'ಅವಳ' ಕತೆಯನ್ನಲ್ಲ. ಇದರಿಂದಾಗಿ ಹೆಂಗಸರಿಗೆ ಇತಿಹಾಸವೂ ಇಲ್ಲ, ಈ ಸಮಾಜಕ್ಕೆ ಅವರದೇ ಆದ ಕೊಡುಗೆಗಳು ಇಲ್ಲ.

ಪುರುಷ ಆರ್ಥಿಕ ತಜ್ಞರು 'ಕೆಲಸ' ಎಂದರೇನು ? 'ಮೌಲ್ಯ' ಎಂದರೇನು ಎಂಬುದನ್ನು ವ್ಯಾಖ್ಯಾನಿಸಿದ್ದಾರೆ. ಅವರ ಪ್ರಕಾರ ಸ್ತ್ರೀಯರ ಕೆಲಸ-ಕೆಲಸವಲ್ಲ, ಜೊತೆಗೆ ಮೌಲ್ಯಯುತವಾದುದೂ ಅಲ್ಲ, ಯಾರಾದರೂ ಪುರುಷರನ್ನು ಕೇಳಿ ; "ನಿಮ್ಮ ಹೆಂಡತಿ ಏನು ಮಾಡುತ್ತಾರೆ' ಅವನು ಹೇಳುತ್ತಾನೆ, 'ಹೋ ಏನೂ ಇಲ್ಲ, ಅವಳು ಬರಿಯ ಹೌಸ್ ವೈಫ್. ಆಕೆ ಕೆಲಸ ಮಾಡುವುದಿಲ್ಲ"

ಭಾಷೆಯೂ ಸಹ ಪಿತೃ ಪ್ರಾಧಾನ್ಯತೆ ಹೊಂದಿದೆ. ಇಂದು ಪತ್ರಿಕೆಗಳು, ಸುದ್ದಿ ತಾಂತ್ರಿಕತೆಗಳು ಪುರುಷರಿಂದ ನಿಯಂತ್ರಿಸಲ್ಪಟ್ಟವೆ. ಜೊತೆಗೆ ಇವುಗಳಲ್ಲಿ ಲಿಂಗಾಧಾರಿತ ಪೂರ್ವಗ್ರಹ ಪೀಡಿತ ಭಾವನೆಗಳಿಂದ ಹೆಂಗಸರನ್ನು ಕೆಳದರ್ಜೆಯವರೆಂದು ಚಿತ್ರಿಸಲಾಗುತ್ತದೆ.

ಈ ರೀತಿಯ ಪುರುಷ ಜ್ಞಾನ ಅನುಭವ ವೇದ್ಯ ಜ್ಞಾನವನ್ನು ತಿರಸ್ಕರಿಸುತ್ತದೆ. ಪುಸ್ತಕ ಜ್ಞಾನ, ಡಿಗ್ರಿಗಳು, – ಇಂತಹವುಗಳೇ ಮೌಲ್ಯಯುತವೆಂದು, ಗೌರವಾನ್ವಿತವೆಂದು ಪರಿಗಣಿಸಲ್ಪಡುತ್ತವೆ. ಆದ್ದರಿಂದಲೇ ತಾಯಂದಿರು ಇಡಿಯ ಪ್ರಪಂಚವನ್ನೇ ಶಿಕ್ಷಣವಂತರನ್ನಾಗಿಸಿದರೂ ಅವರು ಶಿಕ್ಷಣ ತಜ್ಞರೆಂದು ಪರಿಗಣಿತರಾಗುವುದಿಲ್ಲ. ಮಹಿಳೆಯರು ಉಪಚರಿಸಿದರೂ ನರ್ಸಗಳಾಗಿದ್ದರೂ 'ಹೀಲರ್ಸ್' ಎಂದು ಪರಿಗಣಿಸಲ್ಪಡುವುದಿಲ್ಲ. ಮಹಿಳೆಯರು 60 ./. ನಷ್ಟು ವ್ಯವಸಾಯದ ಕೆಲಸಗಳನ್ನು ಮಾಡಿದರೂ ರೈತರೆಂದು ಪರಿಗಣಿಸಲ್ಪಡುವುದಿಲ್ಲ. ಅವರು ರೈತರ ಹೆಂಡತಿಯರು ಮಾತ್ರ.

ಯು.ಎನ್. ಅಂಕಿ-ಅಂಶಗಳ ಪ್ರಕಾರ ಪ್ರಪಂಚದಲ್ಲಿ ಒಟ್ಟು ಘಂಟೆಗಳ 3ರ 2ರಷ್ಟು ಭಾಗದ ಕೆಲಸವನ್ನು ಹೆಂಗಸರು ಮಾಡಿದರೂ, ಪ್ರಪಂಚದ ಆದಾಯದ 10ರ ಒಂದು ಭಾಗವನ್ನು ಮಾತ್ರ ಅವರು ಪಡೆಯುತ್ತಾರೆ ಹಾಗೂ 100ರಲ್ಲಿ 1 ಭಾಗ ಆಸ್ತಿಯನ್ನು ಮಾತ್ರ ಅವರು ಹೊಂದಿರುತ್ತಾರೆ.

ಮಹಿಳೆಯರ ಜ್ಞಾನವನ್ನು ತಿರಸ್ಕರಿಸುವುದರ ಮೂಲಕ, ಅವರ ಕೊಡುಗೆಯನ್ನು ಕಡೆಗಣಿಸುವುದರ ಮೂಲಕ ಅವರನ್ನು ಅಡಿಯಾಳುಗಳೆಂದು ವ್ಯಾಖ್ಯಾನಿಸಲಾಗಿದೆ. ಅವರನ್ನು ಎರಡನೆಯ ದರ್ಜೆಯವರನ್ನಾಗಿಸುವ ಮೂಲಕ ಪಿತೃಪ್ರಧಾನ ಜ್ಞಾನ ಮಹಿಳೆಯರಿಗೆ ಅನ್ಯಾಯ ಮಾಡಿದೆ. ಈ ರೀತಿಯ ಶಿಕ್ಷಣ ಹಾಗೂ ಜ್ಞಾನದ ವ್ಯವಸ್ಥೆಗಳು ಪಿತೃಪ್ರಧಾನ ವ್ಯವಸ್ಥೆಯನ್ನು ಬಲಗೊಳಿಸುವಲ್ಲಿ ಕಾರಣವಾಗಿವೆ. ಈ ವ್ಯವಸ್ಥೆಗಳು ಮಹಿಳೆಯರನ್ನು ಸಶಕ್ತರನ್ನಾಗಿಸುವ ಬದಲು ಮನೆಯ ಗೋಡೆಯೊಳಗೆ ಬಂಧಿಸಿವೆ. ಬಂಧಿಸಬಲ್ಲವು, ಇದಕ್ಕಿಂತ ಹೆಚ್ಚು ದುಷ್ಪರಿಣಾಮವಾದದ್ದೆಂದರೆ ಅರ್ಥ

ಮಾನವೀಯ ಜನಾಂಗದ ಅನುಭವಗಳ ಮೇಲೆ ಅವಲಂಬಿತವಾಗಿರುವ ಜ್ಞಾನ ಅರ್ಧ ಸತ್ಯವಾಗಿರುತ್ತದೆ. ಅರ್ಧ ಗಣನೀಯವಾಗಿರುತ್ತದೆ, ತಪ್ಪು ತಿಳುವಳಿಕೆಯುಳ್ಳದ್ದಾಗಿರುತ್ತದೆ.

ಪುರುಷರ ಹಾಗೂ ಪಾಶ್ಚಿಮಾತ್ಯ ಆಲೋಚನಾ ಕ್ರಮ ಕೆಳಗಿನವುಗಳ ಮಧ್ಯೆ ದ್ವಂದ್ವವನ್ನು ಸೃಷ್ಟಿಸಿವೆ.

ಮನಸ್ಸು ಮತ್ತು ದೇಹ
ಸಂಸ್ಕೃತಿ ಮತ್ತು ಪ್ರಕೃತಿ
ಕಾರಣ ಮತ್ತು ಭಾವನೆ
ಸಾರ್ವಜನಿಕ ಮತ್ತು ವೈಯಕ್ತಿಕತೆ.

ಪುರುಷರು ಉತ್ತಮವೆಂಬುದನ್ನು, ಮುಖ್ಯವಾದದ್ದು ಎಂಬುದನ್ನು ಪ್ರತಿನಿಧಿಸುತ್ತಾನೆ. ಅಂದರೆ ಮನಸ್ಸು, ಸಂಸ್ಕೃತಿ, ವೈಚಾರಿಕತೆ, ಸಾರ್ವಜನಿಕದೊಂದಿಗೆ ಪುರುಷರು ಸಮೀಕರಣಗೊಳಿಸಲ್ಪಟ್ಟರೆ, ಉಪೇಕ್ಷಿಸಬಹುದಾದದ್ದು ಎಂಬುದನ್ನು, ಕೆಳದರ್ಜೆಯದು ಎಂಬುದನ್ನು ಹೆಂಗಸರು ಪ್ರತಿನಿಧಿಸುತ್ತಾರೆ.

ಈ ದಿನ ನಾವು ನೋಡುತ್ತಿರುವ ಜಗತ್ತು ಈ ರೀತಿಯ ಛಿದ್ರವಾಗಿರುವ ಆಲೋಚನಾ ಕ್ರಮದ ಪ್ರತಿರೂಪವಾಗಿರುವಂತಹದು. ಈ ರೀತಿಯ ಜ್ಞಾನ ಹಾಗೂ ಶಿಕ್ಷಣಗಳಿಂದಾಗಿ ಬದುಕಿಗೇ ತೀವ್ರ ರೀತಿಯ ಅಪಾಯಗಳನ್ನು ನಾವು ಎದುರಿಸುತ್ತಿದ್ದೇವೆ. ಈ ಬಗೆಯ ಅಪಾಯ ಉಂಟಾಗುತ್ತಿರುವುದು ಶಿಕ್ಷಣ, ವೈಚಾರಿಕತೆ, ವೈಜ್ಞಾನಿಕ ಜನರಿಂದ ಹಾಗೂ ದೇಶಗಳಿಂದ. ಅವರ ಬದುಕಿನ ಶೈಲಿ ಜೀವನಾಧಾರವಾದುದಲ್ಲ. ಅವರ ಶೋಷಣೆ ಬಡತನವನ್ನು ಮುಂದುವರಿಸಿಕೊಂಡು ಹೋಗುವಂತಹದು. ಅವರು ಸೃಷ್ಟಿಸಿದ ಯಂತ್ರೋಪಕರಣಗಳಿಂದ ಛಿದ್ರತೆಯನ್ನು ಹರಡುತ್ತಿದ್ದಾರೆ. ನಿಮಿಷ, ನಿಮಿಷಕ್ಕೆ 2 ಮಿಲಿಯನ್ ಡಾಲರ್‌ಗಳನ್ನು ಅವರು ಯುದ್ಧ ಸಾಮಗ್ರಿಗಳು, ಸೈನ್ಯಕ್ಕಾಗಿ ಖರ್ಚು ಮಾಡುತ್ತಿರುತ್ತಾರೆ. 1986ರಲ್ಲಿ 'ಶಿಕ್ಷಣವಂತ' ಪ್ರಪಂಚದ ನಾಯಕರು 900 ಬಿಲಿಯನ್ ಡಾಲರ್‌ಗಳನ್ನು ಯುದ್ಧ ಯಂತ್ರೋಪಕರಣಗಳ ಬಗ್ಗೆ ಖರ್ಚು ಮಾಡಿದ್ದಾರೆ. ಪ್ರಪಂಚದಲ್ಲಿ ಮಿಲಿಯನ್‌ಗಟ್ಟಲೆ ಜನರು ಅರೆಹೊಟ್ಟೆಯಿಂದ, ಕಾಯಿಲೆಯಿಂದ ನರಳುತ್ತಿದ್ದಾರೆ.

'ಶಿಕ್ಷಣ'ವಂತ ಜನರು ಹೆಚ್ಚು ಲಂಚಕೋರರಾಗಿದ್ದಾರೆ. ಯಾವಾಗಲೂ ತಮ್ಮ ಶಿಕ್ಷಣ ಹಾಗೂ ಸಂಪರ್ಕಗಳಿಂದಾಗಿ ಕಾನೂನುಗಳನ್ನು ಮುರಿಯಲು ಧರ್ಮವನ್ನು ಶೋಷಿಸಲು, ರಾಜಕೀಯ ಲಾಭಕ್ಕಾಗಿ ಜಾತಿ ಮತ್ತು ಭಾಷೆಯನ್ನು ಬಳಸಲು ಸಿದ್ಧರಾಗಿರುತ್ತಾರೆ. ಇಂದಿನ ಸೂಪರ್ ವಿಜ್ಞಾನಿಗಳು ಪೆಸ್ಟಿಸೈಡ್ಸ್‌ನಿಂದ, ಕೈಗಾರಿಕೆಗಳ ಕೊಳಚೆಗಳಿಂದ ವಿಷಭರಿತವಾದ ನದಿಗಳನ್ನು ಸೃಷ್ಟಿಸುತ್ತಿದ್ದಾರೆ. ಭೋಪಾಲ್, ಚರ್ನೋಬೈಲ್‌ನಂತಹ ಸಂಗತಿಗಳು ವಾಸ್ತವವಾಗುವಂತಹ ಪ್ರಪಂಚವನ್ನು ಸೃಷ್ಟಿಸುತ್ತಿದ್ದಾರೆ. ಕೆಲವೇ ಮಲ್ಟಿ ನ್ಯಾಷನಲ್ ಕಾರ್ಪೋರೇಷನ್‌ಗಳು ಇಡಿಯ ಪ್ರಪಂಚದ ಬಹುತೇಕ ಸಂಪನ್ಮೂಲಗಳನ್ನು, ಮಾರ್ಕೆಟ್‌ಗಳನ್ನು ನಿಯಂತ್ರಣಗೊಳಿಸುವಂತಹ ಪ್ರಪಂಚವನ್ನು ಸೃಷ್ಟಿಸಿದ್ದಾರೆ.

ನಾವು ಸ್ತ್ರೀಯರು ಖಂಡಿತವಾಗಿಯೂ ಇಂತಹ ಜ್ಞಾನವನ್ನು, ಆ ಶಿಕ್ಷಣವನ್ನು ಬಯಸುವುದಿಲ್ಲ. ಇಂತಹ ಜ್ಞಾನ ಮತ್ತು ಶಿಕ್ಷಣ ಇತರರನ್ನು ನಿಯಂತ್ರಿಸಲು, ಲಾಭ ಅಧಿಕಾರವನ್ನು ಗಳಿಸಲು ಮುಖ್ಯವಾದ ಉಪಕರಣಗಳಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ನಡೆದಿರುವ ಕ್ರಾಂತಿಕಾರಿ ಸಂಗತಿಯೆಂದರೆ ಬಹಳ ಜನ ಹೆಂಗಸರು ಜ್ಞಾನವನ್ನು ಸೃಷ್ಟಿಸತೊಡಗಿದ್ದಾರೆ. ಈ 150 ವರ್ಷಗಳಲ್ಲಿ ಹೆಂಗಸರು ಶಿಕ್ಷಣ ಹೊಂದಿದ್ದಾರೆ. ಸಂಶೋಧನೆ ನಡೆಸಿದ್ದಾರೆ, ಪಿತೃ ಪ್ರಧಾನ ಜ್ಞಾನಕ್ಕೆ ಸವಾಲು ಒಡ್ಡಲು ಪ್ರಾರಂಭಿಸಿದ್ದಾರೆ. ಮಹಿಳಾ ಇತಿಹಾಸಕಾರರು ಪುರುಷರ ಇತಿಹಾಸವನ್ನು ಪ್ರಶ್ನಿಸತೊಡಗಿದ್ದಾರೆ. ಮಹಿಳಾ ದೇವತಾಶಾಸ್ತ್ರತಜ್ಞರು ಪುರುಷ ಧರ್ಮವನ್ನು ಹಾಗೂ ದೇವತಾ ಶಾಸ್ತ್ರವನ್ನು ವಿಮರ್ಶಿಸತೊಡಗಿದ್ದಾರೆ. ಇದೇ ರೀತಿ ಮಹಿಳಾ ಸಮಾಜ ಶಾಸ್ತ್ರಜ್ಞರು, ಮಾನವ ಶಾಸ್ತ್ರ ತಜ್ಞರು, ವೈದ್ಯರು, ವಕೀಲರು, ಶಿಕ್ಷಣ ತಜ್ಞರು, ವಯಸ್ಕ ಶಿಕ್ಷಣ ತಜ್ಞರು ಎಲ್ಲವನ್ನೂ ಪ್ರಶ್ನಿಸತೊಡಗಿದ್ದಾರೆ.

'ಸೆಕ್ಸಿಸಂ' ಹೋಗಲಾಡಿಸಲು ಮಹಿಳೆಯರು ಪಠ್ಯ ಪುಸ್ತಕಗಳತ್ತ ನೋಡತೊಡಗಿದ್ದಾರೆ. ಕಾಲೇಜ್, ವಿಶ್ವವಿದ್ಯಾನಿಲಯಗಳಲ್ಲಿ ಸೆಕ್ಸಿಸ್ಟ್ ಪೂರ್ವಗ್ರಹ ಪೀಡಿತ ಭಾವನೆಗಳಿವೆ ಎಂಬುದನ್ನು ಅರಿಯತೊಡಗಿದ್ದಾರೆ. ಸರ್ಕಾರೇತರ ಸ್ವಯಂ ಸಂಸ್ಥೆಗಳಲ್ಲಿ ಬಹುತೇಕ ಸಂಸ್ಥೆಗಳು ಪುರುಷರ ಪ್ರಾಧಾನ್ಯತೆ ಹೊಂದಿರುವುದನ್ನು ಗಮನಿಸಿದ್ದಾರೆ.

ಹೀಗೆ ನಮ್ಮ ಸಹೋದರಿಯರಿಂದ, ನಮ್ಮ ಹಿಂದಿನ ತಲೆಮಾರಿನ ಮಹಿಳೆಯರಿಂದ ನಡೆದ ಸಂಶೋಧನೆ, ಗುರುತಿಸುವಿಕೆ ನಮಗೆ ಸಶಕ್ತತೆ ನೀಡಿದೆ. ನಮ್ಮಲ್ಲಿರುವ ಅಜ್ಞಾನ ಮತ್ತು ಮೌನವನ್ನು ಮುರಿಯುವಲ್ಲಿ ಸಮರ್ಥನೆ ನೀಡಿದೆ. ಜೊತೆಗೆ ದೃಢವಾಗಿ ನಿಲ್ಲುವಲ್ಲಿ ಸಹಕರಿಸಿದೆ.

ಮಹಿಳಾ ಸಶಕ್ತತೆಯ ಶಿಕ್ಷಣದ ಬಗ್ಗೆ ಮಾತನಾಡುವಾಗ ನಾವು ಶಿಕ್ಷಣದ ವಸ್ತು ಹಾಗೂ ಶಿಕ್ಷಣದ ಕ್ರಮದ ಕಡೆಗೆ ನೋಡಬೇಕಾಗುತ್ತದೆ. ಈ ಶಿಕ್ಷಣ ಮಹಿಳೆಯರನ್ನು ನಾಲ್ಕು ಗೋಡೆಯ ಮಧ್ಯೆ ಬಂದಿಸುತ್ತದೆಯೋ, ವಿಮೋಚನೆಗೊಳಿಸುತ್ತದೆಯೋ, ಸಶಕ್ತರನ್ನಾಗಿಸುತ್ತದೆಯೋ, ಅಧಿಕಾರರಹಿತರನ್ನಾಗಿಸುತ್ತದೆಯೋ ಎಂಬುದನ್ನು ವಿಮರ್ಶಿಸಿ ನೋಡಬೇಕಾಗುತ್ತದೆ.

ಯಾಕೆ ಮಹಿಳೆಯರು ಸಶಕ್ತರಾಗಬೇಕು ?

ಮಹಿಳೆಯರು ಸಶಕ್ತರಾಗಬೇಕು-ಏಕೆಂದರೆ ಅವರು ಹಿಂಸೆಯಿಂದ ಮತ್ತು ಯುದ್ಧದಿಂದ ಮುಕ್ತವಾದ ಪ್ರಪಂಚದ ಶೋಧನೆಯತ್ತ ನಮ್ಮನ್ನು ಸಾಗಿಸುತ್ತಾರೆ. ಪ್ರಪಂಚದ ಬಹು ಭಾಗಗಳಲ್ಲಿ ಮಹಿಳೆಯರು ಶಾಂತಿ ಮತ್ತು ಪರಿಸರ ಚಳುವಳಿಗಳನ್ನು ನಡೆಸಿದ್ದಾರೆ.

ಜೀವನಾಧಾರ ಅಭಿವೃದ್ಧಿಯು ಮಹಿಳಾ ಕೇಂದ್ರಿತವಾಗಿರಬೇಕೆಂದು ನಾನು ನಂಬುತ್ತೇನೆ. ನಾನು ಸ್ತ್ರೀವಾದಿ ಅಥವಾ ಮಹಿಳೆಯಾಗಿ ಈ ಮಾತು ಹೇಳುತ್ತಿಲ್ಲ ಯಾಕೆ ಈ ಮಾತು ಹೇಳುತ್ತಿದ್ದೇನೆಂದರೆ ಐತಿಹಾಸಿಕವಾಗಿ ಹಾಗೂ ಈ ದಿನಗಳಲ್ಲಿಯೂ ಸಹ ಮಹಿಳೆಯರು ಸಮಾಜದ ಮೂಲಭೂತ ಅಗತ್ಯಗಳಾದ ಆಹಾರ, ಹುಲ್ಲು, ಇಂಧನ, ನೆಲೆ, ಬೆಳೆಸುವಿಕೆ ಇಂತಹವುಗಳ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ. ಅವರು ಪ್ರಕೃತಿಯ ಜೊತೆ ಸಾಮರಸ್ಯ ಹೊಂದಿದ್ದಾರೆ. ಮಗುವನ್ನು ಹೆರುವವರಾದ್ದರಿಂದ ತಮ್ಮ ಸಹಜ ಪ್ರಕೃತಿಯೊಂದಿಗೇ ಅವರು ಸಾಮರಸ್ಯ ಹೊಂದಬೇಕಾಗಿದೆ. ಅವರು ಸೃಷ್ಟಿಸುತ್ತಾರಲ್ಲದೆ ಬೆಳೆಸುತ್ತಾರೆ ಕೂಡಾ. ಪುರುಷರು ಇದನ್ನು ಮಾಡಲು ಸಾಧ್ಯವಿಲ್ಲವೆಂದಲ್ಲ. ಮಹಿಳೆಯರು ದೈಹಿಕವಾಗಿಯೇ ಬಹಳ ಕಾಳಜಿ ಹಾಗೂ ಬೆಳೆಸುವ ಗುಣ ಇರುವವರೆಂದೂ ನಾನು ಹೇಳುತ್ತಿಲ್ಲ. ಶತಮಾನಗಳಿಂದ ಮಹಿಳೆಯರು ಈ ಬಗ್ಗೆ ಸಾಮಾಜೀಕರಣ ಹೊಂದಿದ್ದಾರೆ. ಮತ್ತು ಜೀವನಾಧಾರಿತ ಅಭಿವೃದ್ಧಿ, ಬೆಳೆಸುವಿಕೆ, ಉಳಿಸುವಿಕೆ, ಚಿಕಿತ್ಸೆಯಲ್ಲಿ ಯಾವಾಗಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಪರಿಸರಕ್ಕೆ ಅಪತ್ಕಾರಿಯಾದ ಅಭಿವೃದ್ಧಿಯಿಂದಾಗಿ ಗ್ರಾಮೀಣ ಮಹಿಳೆಯರ ಬದುಕೇ ಹೆಚ್ಚು ಭಯಾವೃತವಾಗಿದೆ. ಮಹಿಳೆಯರು ಕಡು ಬಡವರೂ ಹಾಗೂ ಅತ್ಯಂತ ಅಸಹಾಯಕರಾಗಿದ್ದಾರೆ. ಯಾವಾಗ ಕಾಡುಗಳು, ಭೂಮಿ, ನದಿಗಳು, ಅಥವಾ ಭೂಮಿ ನಶಿಸಿ ಹೋಗುತ್ತವೆಯೋ, ಸಾವಿಗೀಡಾಗುತ್ತವೆಯೋ ಆಗ ಈ ಹೆಂಗಸರು ದುಃಖಕ್ಕೀಡಾಗುತ್ತಾರೆ. ಏಕೆಂದರೆ ಮಹಿಳೆಯರೇ ಇದರಿಂದ ಹೆಚ್ಚು ಹಾನಿಗೊಳಗಾಗುವುದು. ಹೆಂಗಸರಿಗೆ ಸೃಷ್ಟಿಯ ನೋವು ಗೊತ್ತು, ಹಾಗಾಗಿ ಪತನಗೊಳಿಸುವುದನ್ನು ಅವರು ದ್ವೇಷಿಸುತ್ತಾರೆ. ಈ ಕಾರಣಗಳಿಗಾಗಿ ಕಾಡುಗಳನ್ನು ರಕ್ಷಿಸುವಲ್ಲಿ, ಪರಿಸರ ಮಾಲಿನ್ಯತೆಯ ವಿರುದ್ಧ, ಸೈನ್ಯದ ವಿರುದ್ಧದ ಚಳುವಳಿಯಲ್ಲಿ ಮಹಿಳೆಯರು ಜೀವನಾಧಾರಿತ ಅಭಿವೃದ್ಧಿಯ ಕೇಂದ್ರಬಿಂದುಗಳಾಗಿರಬೇಕಾಗುತ್ತದೆ. ಮಹಿಳೆಯರು ಒತ್ತಾಯಿಸುವಂತಹ ಬೇಡಿಕೆಗಳೆಂದರೆ ಮೂಲಭೂತ ಅವಶ್ಯಕತೆಗಳು ಪೂರೈಕೆಯಾಗಬೇಕು, ಹತ್ಯೆ ನಿಲ್ಲಬೇಕು. ಮಹಿಳೆಯರು ಹೆಚ್ಚು ಭಾವನಾತ್ಮಕರು ಎಂದು ಹೇಳಲಾಗುತ್ತದೆ. ಭಾವೋದ್ವೇಗಿಗಳು ಎಂದು ಹೇಳಲಾಗುತ್ತದೆ. ಜೀವನಾಧಾರಿತ ಅಭಿವೃದ್ಧಿಯ ಹಂತದಲ್ಲಿ ಭಾವನಾತ್ಮಕತೆ, ಭಾವೋದ್ವೇಗ ಹೆಚ್ಚು ಅಗತ್ಯವಾಗುತ್ತದೆ. ತಣ್ಣಗಿನ ವೈಚಾರಿಕತೆಯಿಂದ ಮಾತ್ರ ಇದು ಸಾಧ್ಯವಾಗುವುದಿಲ್ಲ.

ಮಹಿಳಾ ಸಶಕ್ತತೆಯನ್ನು ಪ್ರಕೃತಿಯ ಸಶಕ್ತತೆ, ಮೂಲೆಗೊತ್ತರಿಸಲ್ಪಟ್ಟ ಜನರ ಮತ್ತು ದೇಶಗಳ ಸಶಕ್ತತೆಯಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಮಹಿಳೆಯರ ಹೋರಾಟಗಳು ಶಾಂತಿ ಚಳುವಳಿಯೊಂದಿಗೆ, ಪರಿಸರದ ಚಳುವಳಿಯೊಂದಿಗೆ, ಕಾರ್ಮಿಕ ಚಳುವಳಿಯೊಂದಿಗೆ, ಮಾನವ ಹಕ್ಕುಗಳ ಚಳುವಳಿಯೊಂದಿಗೆ, ಪ್ರಜಾಪ್ರಭುತ್ವದ ಚಳುವಳಿಯೊಂದಿಗೆ ಮತ್ತು ಸಮಾಜದ ವಿಕೇಂದ್ರೀಕರಣದ ಚಳುವಳಿಯೊಂದಿಗೆ ನಿಕಟ ಸಂಪರ್ಕ ಹೊಂದಿರಲೇಬೇಕಾಗುತ್ತದೆ.

ಮಹಿಳೆಯರ ಸಶಕ್ತತೆ ಎಂದರೆ ಈ ಕೆಳಗಿನ ಕೆಲವು ಸಂಗತಿಗಳನ್ನು ನಾನು ಹೇಳುತ್ತಿರುತ್ತೇನೆ.

—ಸಶಕ್ತತೆ ಎಂದರೆ ಮಹಿಳೆಯರ ಕೊಡುಗೆ, ಜ್ಞಾನ ವನ್ನು ಗುರುತಿಸುವುದು,

—ತಮ್ಮ ಹೆದರಿಕೆ, ಅಪಕ್ವತತೆಯ ಭಾವನೆ, ಮತ್ತು ಕೀಳರಿಮೆಯನ್ನು ಹೋಗಲಾಡಿಸಿಕೊಳ್ಳುವ ಹೆಂಗಸಿನ ಹೋರಾಟದಲ್ಲಿ ನೆರವಾಗುವುದು.

—ಆತ್ಮಗೌರವ, ಆತ್ಮ ಪ್ರತಿಷ್ಠೆಯನ್ನು ಮಹಿಳೆಯರು ಹೆಚ್ಚಿಸಿಕೊಳ್ಳುವುದು.

—ತಮ್ಮ ದೇಹಗಳ ಮೇಲೆ ಮಹಿಳೆಯರು ತಾವೇ ನಿಯಂತ್ರಣ ಸಾಧಿಸುವುದು.

—ಮಹಿಳೆಯರು ಆರ್ಥಿಕವಾಗಿ ಸ್ವತಂತ್ರ್ಯರಾಗುವುದು, ಮತ್ತು ತಮ್ಮ ಕಾಲ ಮೇಲೆ ತಾವೇ ನಿಲ್ಲುವುದು.

—ಮಹಿಳೆಯರು ಭೂಮಿ ಮತ್ತು ಆಸ್ತಿಯಂತಹ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವುದು

—ಮಹಿಳೆಯರ ಕೆಲಸದ ಭಾರವನ್ನು–ವಿಶೇಷವಾಗಿ ಮನೆಯಲ್ಲಿನ ಕೆಲಸದ ಭಾರವನ್ನು ಕಡಿಮೆ ಮಾಡುವುದು.

—ಮಹಿಳಾಗುಂಪುಗಳನ್ನು ಮತ್ತು ಸಂಸ್ಥೆಗಳನ್ನು ಹುಟ್ಟು ಹಾಕುವುದು ಮತ್ತು ಅವುಗಳನ್ನು ಬಲಗೊಳಿಸುವುದು.

—ಕಾಳಜಿ ವಹಿಸುವ, ಬೆಳೆಸುವ, ಸೂಕ್ಷ್ಮತೆ ಇಂತಹ ಗುಣಗಳನ್ನು ಮಹಿಳೆಯರಲ್ಲಿ ಮಾತ್ರವಲ್ಲ, ಗಂಡಸರಲ್ಲೂ ಸಹ ಬೆಳೆಸುವುದು.

ಮಹಿಳೆಯರ ಸಶಕ್ತತೆ ಎಂದರೆ ಅಗತ್ಯವಾಗಿ ಸ್ತ್ರೀತ್ವ, ಪುರುಷತ್ವದಂತಹ ಕಲ್ಪನೆಗಳನ್ನು ಮರು ವ್ಯಾಖ್ಯಾನಗೊಳಿಸುವುದು, ಪುರುಷ/ಸ್ತ್ರೀ ಸಂಬಂಧಗಳನ್ನು ಬದಲಾಯಿಸುವುದು. ಈ ಬಗ್ಗೆ ಈ ಮಹಿಳೆಯರು ಹೆಚ್ಚು ಹೆಚ್ಚು ಮಾತನಾಡತೊಡಗಿದ್ದಾರೆ. ಹೆಚ್ಚುತ್ತಿರುವ ಗುಮಾನಿಗೆ ವಿರುದ್ಧವಾಗಿ ನಾನು ಹೇಳುತ್ತಿದ್ದೇನೆ–ಸ್ತ್ರೀವಾದಿಗಳು ಪುರುಷರಿಗೆ ವಿರೋಧವಾಗಿಲ್ಲ. ನಾವು ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧ ಇರುವವರು, ಹಿಂಸಾತ್ಮಕ ಪುರುಷತ್ವವನ್ನು ನಾವು ವಿರೋಧಿಸುತ್ತೇವೆ. ನಾವು ಇಷ್ಟ ಪಡುವ ಪುರುಷ ವಿವೇಕಯುತರಾಗಿರಬೇಕು, ಕಾಳಜಿ ವಹಿಸುವರಾಗಿರಬೇಕು. ಒಳ್ಳೆಯ ಪುರುಷರ ಮಾದರಿಗಳೆಂದರೆ ಬಲವಾದ ಸ್ನಾಯುಗಳನ್ನು ಹೊಂದಿರುವ, 'ಸೂಪರ್ ಮೆನ್'ಗಳಲ್ಲ. ಮಹಾತ್ಮಗಾಂಧಿ, ಜೀಸಸ್ ಕ್ರೈಸ್ತ, ಗುರುನಾನಕ್, ಬುದ್ಧನಂತಹ ಪುರುಷರು. ಜೀವನದಲ್ಲಿತಮ್ಮ ಜೊತೆಗಾರರಾಗುವವರು ಕೇವಲ ತಂದೆಯಾಗಿ ನಡೆದುಕೊಳ್ಳುವವರಾದರೆ ಸಾಲದು, ತಾಯಂದಿರಾಗಿಯೂ ಸಹ ನಡೆದುಕೊಳ್ಳುವಂತವರಾಗಿರಬೇಕು.

ವಿನೀತ ಪುರುಷರನ್ನು ಸೃಷ್ಟಿಸುವಂತಹ ಶಿಕ್ಷಣ ಕಾರ್ಯಕ್ರಮ ಹಾಗೂ ಮಾದರಿಗಳನ್ನು ಅಭಿವೃದ್ಧಿಗೊಳಿಸುವ ಸವಾಲು ಇಂದು ವಯಸ್ಕರ ಶಿಕ್ಷಣ ತಜ್ಞರ ಮುಂದಿದೆ. ಸೂಕ್ಷ್ಮ ಮನಸ್ಸಿನ ಪುರುಷರು–ಪುರುಷರನ್ನು ಸಂಘಟಿಸಿ ಅವರ ನಡತೆ ಹಾಗೂ ಮನೋಭಾವಗಳನ್ನು ಬದಲಾಯಿಸುವಂತೆ ಮತ್ತು ಚಿಂತಿಸುವಂತೆ ಮಾಡುವುದು ಇಂದು ಅಗತ್ಯವಾಗಿದೆ.

ನಮಗೆ ಅಗತ್ಯವಿರುವ ಶಿಕ್ಷಣದ ಮಾದರಿ

ವಿಮೋಚನಾ ಭಾವದಿಂದ ಪ್ರಾರಂಭವಾದ ಶಿಕ್ಷಣ ಹಾಗೂ ಜ್ಞಾನ ಮಹಿಳೆಯರ ಸಶಕ್ತತೆಯನ್ನು ಪ್ರಾರಂಭಿಸಿವೆ. ಪಿತೃಪ್ರಧಾನ ಜ್ಞಾನ, ಮೌಲ್ಯಗಳು, ನಡತೆಗಳನ್ನು ಸವಾಲು ಮಾಡಲು ಸಾಧ್ಯವಾಗುವಂತಹ ಜ್ಞಾನ ಹಾಗೂ ತಿಳುವಳಿಕೆಗಳನ್ನು ಪಡೆದುಕೊಳ್ಳಲು ನಾವು ಸಾಕಷ್ಟು ಪ್ರಯತ್ನಗಳನ್ನು ಹಾಕಬೇಕಿದೆ. ಶಬ್ದವನ್ನು ಓದುವ, ಅಥವಾ ಅರ್ಥ ಮಾಡಿಕೊಳ್ಳುವ ಶಿಕ್ಷಣವಷ್ಟೇ ಅಲ್ಲ, ಓದುವ ಅರ್ಥಮಾಡಿಕೊಳ್ಳುವ ಮತ್ತು ನಮ್ಮ ಪ್ರಪಂಚದ ಮೇಲೆ ಹಿಡಿತ ಸಾಧಿಸುವ ಶಿಕ್ಷಣದ ಅಗತ್ಯ ನಮಗಿವೆ. ನಮ್ಮ ಬದುಕಿಗೆ ನಾವೇ ಒಡತಿಯರಾಗುವ, ನಮ್ಮ ಹಣೆಯ ಬರಹವನ್ನು ನಾವೇ ನಿರ್ಧರಿಸುವಂತಹ ಶಿಕ್ಷಣ ನಮಗೆ ಬೇಕು. ವೇಗವಾಗಿ ಬದಲಾವಣೆ ಹೊಂದುತ್ತಿರುವ ಬದುಕಿನ ವಾಸ್ತವತೆಗಳನ್ನು ಅರ್ಥಮಾಡಿಕೊಳ್ಳಲು–ವಿಶ್ಲೇಷಣಾ ಸಾಮರ್ಥ್ಯಗಳು ಸಾಧ್ಯವಾಗುವಂತಹ ಶಿಕ್ಷಣ ನಮಗೆ ಬೇಕು.ನಮ್ಮಲ್ಲಿ ಭರವಸೆ, ಗಟ್ಟಿತನ ಹುಟ್ಟು ಹಾಕುವ ಶಿಕ್ಷಣ ನಮಗೆ ಬೇಕು. ಮಹಿಳಾ ಅಕ್ಷರಾಭ್ಯಾಸದಲ್ಲಿ ನಾವು ಭಾಗಿಗಳಾಗಿದ್ದರೆ, ಈ ಅಕ್ಷರಭ್ಯಾಸದ ತರಗತಿಗಳು ಮಹಿಳೆಯರ ಸಂಘಟನೆಗಳನ್ನು ಬಲಗೊಳಿಸುವಂತೆ ನಾವು ಮಾಡಬೇಕು. ಅವರ ಬದುಕಿನ ಮೇಲೆ ಅವರೇ ನಿಯಂತ್ರಣ ಸಾಧಿಸುವಂತಾಗಬೇಕು. ಅವರ ಮೌನವನ್ನು ಮುರಿಯುವಂತಹದಾಗಬೇಕು. ಅವರು ಬೆಳಕಿಗೆ ಬರುವಂತಾಗಬೇಕು. ಈ ಅಕ್ಷರಾಭ್ಯಾಸದ ತರಗತಿಗಳು ಮಹಿಳೆಯರಿಗೆ ಸ್ವತಂತ್ರ್ಯವಾಗಿರುವ, ಅವರ

ಮಾನವೀಯ ಸಾಮರ್ಥ್ಯ ಗುರುತಿಸಲು ಸಾಧ್ಯವಾಗುವಂತಹ ವಾತಾವರಣವನ್ನು ಸೃಷ್ಟಿಸಬೇಕು.

ಮಹಿಳಾ ಶಿಕ್ಷಣದ ವಿಧಾನ–ಭಾಗವಹಿಸುವಂತದ್ದಾಗಿರಬೇಕು. ಶ್ರೇಣೀಕೃತ ವ್ಯವಸ್ಥೆ ಇರದ ಶಿಕ್ಷಣ ವ್ಯವಸ್ಥೆಯಾಗಿರಬೇಕು. ಈ ಮೂಲಕ ಅವರ ಬಗ್ಗೆ ಅವರಿಗೇ ಭರವಸೆ ಉಂಟಾಗಲು, ಸ್ವ-ಪ್ರತಿಷ್ಠೆ ಬೆಳೆಸಿಕೊಳ್ಳಲು, ಸೃಜನಾತ್ಮಕವಾಗಿರಲು, ಸಂತೋಷ, ಉತ್ಸಾಹದಿಂದಿರಲು ಅವರಿಗೆ ಸಾದ್ಯವಾಗಬೇಕು. ಇದೇ ಅವರನ್ನು ಸಶಕ್ತರನ್ನಾಗಿಸುತ್ತದೆ.

ಎಲ್ಲದಕ್ಕಿಂತ ಹೆಚ್ಚಾಗಿ ನಮ್ಮ ಶೈಕ್ಷಣಿಕ ಪ್ರಯತ್ನಗಳು ಜೀವನಾಧಾರಿತ ಅಭಿವೃದ್ಧಿಯ ಬಗ್ಗೆ ಅವರ ದೃಷ್ಟಿಕೋನ, ಕಾಳಜಿಯ ಸ್ಪಷ್ಟತೆಯನ್ನು ನೀಡಬೇಕಾಗುತ್ತದೆ.

ಶಿಕ್ಷಣ ಬರಿಯ ಪರಿಣತಿಗಳನ್ನು ಹೆಚ್ಚಿಸುವುದಷ್ಟೇ ಅಲ್ಲ, ಮಹಿಳೆಯರಲ್ಲಿ ನ್ಯಾಯ, ಸಮಾನತೆ, ಪ್ರಾಮಾಣಿಕತೆ, ಸತ್ಯವಂತರಾಗುವ, ಶೋಷಿತ ವರ್ಗಗಳ ನಡುವೆ ಒಗ್ಗಟ್ಟು ತೋರಿಸುವಂತಹ ಮೌಲ್ಯಗಳನ್ನು ಬೆಳೆಸಬೇಕು. ವಿವಿಧ ಹಂತಗಳಲ್ಲಿ, ವಿವಿಧ ಹೋರಾಟಗಳಲ್ಲಿ ಕಾಳಜಿ ಮತ್ತು ಧೈರ್ಯದಿಂದ ವರ್ತಿಸುವ ರೀತಿಯಲ್ಲಿ ಮಹಿಳೆಯರಲ್ಲಿ ಶಿಕ್ಷಣ ಬೆಳೆಸಬೇಕಾಗುತ್ತದೆ.


ಶಿಕ್ಷಣ ವ್ಯವಸ್ಥೆ ಮಹಿಳೆಯರಲ್ಲಿ ವಿಮರ್ಶಾ ಪ್ರವೃತ್ತಿ ಹಾಗೂ ಪ್ರಶ್ನಿಸುವ ಮನಸ್ಸನ್ನು ಹಾಗೂ ವಾಸ್ತವವನ್ನು ಅರ್ಥಮಾಡಿಕೊಳ್ಳುವಲ್ಲಿ ವೈಜ್ಞಾನಿಕ ಮನೋಭಾವವನ್ನು ಹುಟ್ಟು ಹಾಕಬೇಕು. ಪ್ರಧಾನ ಸಂಸ್ಕೃತಿ ಹಾಗೂ ರಾಜಕೀಯ ವ್ಯವಸ್ಥೆಗಳು ನೀಡುವ ಸಿದ್ಧ ಉತ್ತರಗಳಿಂದ ನಾವು ನೀಡುವ ಶಿಕ್ಷಣ ಮಹಿಳೆಯರನ್ನು ಮುಕ್ತಗೊಳಿಸಬೇಕು. ತಮ್ಮ ದೃಷ್ಟಿಕೋನದಿಂದಲೇ ವಾಸ್ತವವನ್ನು ಪರಿಶೋಧಿಸುವಂತಹ ಶಿಕ್ಷಣ ವ್ಯವಸ್ಥೆ ಮಹಿಳೆಯರಿಗೆ ಬೇಕು.

ಶಿಕ್ಷಣ ವ್ಯವಸ್ಥೆ ಅಧಿಕಾರವನ್ನು, ಶೋಷಣೆಯನ್ನು ಪ್ರಶ್ನಿಸುವಂತಹ ಮನೋಭಾವವನ್ನು ಬೆಳೆಸಬೇಕು. ಶಿಕ್ಷಣ ಸಂತೋಷ/ಉತ್ಸಾಹ/ವಿನೋದ ಎಲ್ಲವನ್ನೂ ಹೊಂದಿರಬೇಕು. ನಾವು ಕೆಲಸ ಮತ್ತು ಸಂತೋಷಗಳ ನಡುವೆ ಇರುವಂತೆ ಕಾಣುವ ದ್ವಂದವನ್ನು ದೂರ ಸರಿಸಿಬೇಕು. ಕೆಲಸ–ವಿನೋದದಿಂದ ಕೂಡಿರಬೇಕು. ಗಂಭೀರವಾದ ಕೆಲಸ-ಮನೋರಂಜನೆಯಿಂದ ಕೂಡಿರಬೇಕು. ಯಾರೊಬ್ಬರೂ ಚರ್ಚೆಗೆ ಇರುವ ವಿಚಾರಗಳ ಬಗ್ಗೆ ಹಾಡು ಹೇಳಬಹುದು, ಸಿನೆಮಾಗಳ ನೋಡಬಹುದು. ಶಿಕ್ಷಣ ವ್ಯಕ್ತಿಯಲ್ಲಿರುವ ಸಾಮರ್ಥ್ಯ ಹೊರ ಚೆಲ್ಲುವಂತದಾಗಿರಬೇಕು.

ಮಹಿಳೆಯರ ಸಶಕ್ತತೆ ಗ್ರಾಸ್ ರೂಟ್ ಹಂತದಲ್ಲಿ ಹಾಗೆಯೇ ಸಾಧ್ಯವಾಗುವಂತಹದಲ್ಲ. ಅನೇಕ ರೀತಿಯ ಬೆಳವಣಿಗೆಗಳು ನಮಗೆ ಅಗತ್ಯವಾಗುತ್ತವೆ. ತರಬೇತಿ ನೀಡುವ ಗುಂಪುಗಳು, ಸ್ತ್ರೀವಾದಿ ಸಂಶೋಧಕಿಯರು, ಪ್ರಕಾಶಕರು, ಸ್ತ್ರೀವಾದಿ ಸಿನೆಮಾ ನಿರ್ದೇಶಕಿ, ನಿರ್ಮಾಪಕಿಯರು, ಕವಿಯತ್ರಿಯರು, ಗಾಯಕಿಯರು, ವೈದ್ಯೆಯರು, ವಕೀಲರು ಇವರೆಲ್ಲರು ಇರಬೇಕಾಗುತ್ತದೆ. ಎಲ್ಲರ ಮಧ್ಯೆ ಒಂದು ನೆಟ್ ವರ್ಕಿಂಗ್ ಇರಬೇಕಾಗುತ್ತದೆ.

ಕೊನೆಯದಾಗಿ ಮಹಿಳೆಯರ ಸಶಕ್ತತೆಗಾಗಿ ಜೀವನಾಧಾರಿತ ಅಭಿವೃದ್ಧಿಯಾಗಲೀ, ಮಾನವೀಯ ಹಕ್ಕುಗಳಾಲೀ, ಈ ಹಂತದಲ್ಲಿ ಭಾವನೆಗಳು, ಭಾವೋದ್ವೇಗತೆ, ಭಾವನಾತ್ಮಕತೆ, ನ್ಯಾಯ, ಸಮಾನತೆ, ಪ್ರೀತಿ, ಕಾಳಜಿಯಂತಹ ಮೂಲ್ಯಗಳು ಇರಬೇಕಾಗುತ್ತದೆ. ವಿನೋದ, ಸೃಜನಾತ್ಮಕತೆಗಳು ಇರಬೇಕಾಗುತ್ತದೆ. ಈ ಹೋರಾಟ ದೀರ್ಘಕಾಲದ್ದು, ಯಾವಾಗಲೂ ಗಂಭೀರವಾದ, ದುಃಖಬರಿತ ಮುಖಗಳನ್ನು ಹೊಂದಿರುವುದು ಸರಿಯಲ್ಲ. ನ್ಯಾಯಯುತವಾದ, ಉತ್ತಮ ಭವಿಷ್ಯಕ್ಕಾಗಿ ನಾವು ಹಾಡೋಣ, ಕುಣಿಯೋಣ. ಏಷ್ಯಾ ಉದಯಿಸುವ ಸೂರ್ಯನಿಗೆ ಪ್ರಸಿದ್ಧಿಯಾಗಿರುವ ನಾಡಾಗಿದೆ. ಜೊತೆಗೆ ಈ ನಾಡನ್ನು ಉದಯಿಸುವ ಸ್ತ್ರೀಯರಿಗಾಗಿ ಪ್ರಸಿದ್ಧಿಯಾಗಿಸೋಣ.

(ಕಮಲಾ ಬಾಸಿನ್‌ನವರು "First general Assembly of the Asian and Pacific Bureau of Adult education ಮಾತನಾಡಿದ ವಿಚಾರಗಳ ಸಂಕ್ಷಿಪ್ತ ರೂಪ. ಇದು ಫಿಲಿಫೈನ್ಸ್‌ನ ಟಗಾಟೇ ಪಟ್ಟಣದಲ್ಲಿ ನಡೆಯಿತು.



"ಆಟಕ್ಕುಂಟು ಲೆಖ್ಖಕಿಲ್ಲ"

ಹುಡುಗರು ಆಡುತ್ತಿದ್ದ ಕುಂಟಾಬಿಲ್ಲೆಗೆ
ನಾನೂ ಸೇರಬೇಕೆಂದು ನಿಂತಾಗ
ಕಣ್ಣು ಬಿಟ್ಟಿದ್ದ ಹಿರಿಯಣ್ಣ
ಅಳುತ್ತಾ ಅಮ್ಮನ ಸೆರಗು ಹಿಡಿದು
ದೂರು ಕೊಟ್ಟರೆ ಅಮ್ಮ ನುಡಿದಿದ್ದರು,
'ಹುಡುಗರೊಂದಿಗೆ ನಿನ್ನದು ಎಂತಹುದೇ ಆಟ'
ದೂರನ್ನು ಅಪ್ಪನಿಗೆ ಒಪ್ಪಿಸಿದಾಗ
ಪ್ರೀತಿಯಿಂದಪ್ಪಿ ಅಣ್ಣನೆಡೆ ತಿರುಗಿ
ಗುಡುಗಿದ್ದರು "ಸೇರಿಸಿಕೊಳ್ಳೊ"

ಹಿರಿಯಣ್ಣ ಮುಖ ಧುಮ್ಮಿಸಿ ಕಣಕ್ಕೆ
ಇಳಿದಾಗ ಕಿರಿಯಣ್ಣ ಘೋಷಿಸಿದ್ದ ;
ನಿನಗೆ ಸರಿಯಾಗಿ ಆಟ ಬರುವುದಿಲ್ಲ
ಅದಕ್ಕಾಗಿ ನೀನು ಆಟಕ್ಕುಂಟು
ಲೆಖ್ಖಕ್ಕಿಲ್ಲ !

ಪೆಚ್ಚಾಗಿ ಹೋದರೂ ಚೆನ್ನಾಗಿ ಆಡಿ
ಇವರನ್ನು ಹಿಂದೆ ಹಾಕಿ ಮುಂದಿನ
ಆಟಕ್ಕೆ ಲೆಖ್ಖವೂ ಆಗಬೇಕೆಂದು
ನೆಲಕಚ್ಚಿ ನಿಂತಿದ್ದೆ

ಹುಡುಗರೆಲ್ಲಾ ಆಡಿ-ಆಟ ನನ್ನ
ಪಾಲಿಗೆ ಬಂದಾಗ ಗೂಬೆ ಮನೆಯ ಮುಂದೆ
ನಿಂತು ನೋಡುತ್ತೇನೆ ; ಅಂಡ ಭಂಡ
ಆಟವಾಡಿದ ಹುಡುಗರು ಪ್ರತಿಯೊಂದನ್ನೂ
ತಮ್ಮ ಹಣ್ಣಾಗಿಸಿಕೊಂಡಿದ್ದಾರೆ. ನನಗೆ
ಉಳಿಸಿದ್ದಿದ್ದು ಕೊನೆಯದೊಂದೇ ಮನೆ

ಇವರು ಹಣ್ಣು ಮಾಡಿಕೊಂಡ ಮನೆಗಳನ್ನೆಲ್ಲಾ
ಒಂದೇ ಹಾರಿಗೆ ಹಾರಿ ಉಳಿದ ಆ ಒಂದು
ಮನೆ ನನಗೆ ಹಣ್ಣಾಗುವುದೆಂತು ?

ಪ್ರತಿಯೊಂದು ಮನೆಗೂ ಕುಂಟದೆ
ಕಾಲು ಬೀಸುತ್ತಾ, ಅಮಾಟ್ಟೆಯಲ್ಲೂ
ತಮ್ಮ ಮನೆಗೊಂದು ಕಣ್ಣು ಬಿಟ್ಟುಕೊಂಡೇ
ಮನೆಗಳನ್ನು ದಾಟುತ್ತಾ ಹೋಗುವ ಇವರಿಗೇ
ಆ ಮನೆಯ ಹಣ್ಣು ಕಟ್ಟಿಟ್ಟ ಬುತ್ತಿಯಾಗಿಬಿಟ್ಟರೆ?

ಓಹ್ ದೇವರೆ ನನಗೂ
ಹಕ್ಕಿಯಂತೆ ಹಾರುವ ಶಕ್ತಿ
ಮೈ ಮನಗಳಲ್ಲಿ ಇದ್ದಿದರೆ ? !

ಆಲೋಚಿಸುತ್ತಾ ಅಳು ಮುಖ
ಮಾಡಿ ನೀರುಗಣ್ಣನಿಂದ
ಕೊನೆಯ ಒಂದೇ ಒಂದು
ಮನೆಯನ್ನು ದಿಟ್ಟಿಸುತ್ತಾ
ದಿಕ್ಕುಗೆಟ್ಟವಳಂತೆ ನಿಂತಿದ್ದಾಗ
ಆತುರದಿಂದ ಆಟ ಮುಂದುವರಿಸಲು
ಹಿರಿಯಣ್ಣ ನುಡಿದೇ ಬಿಟ್ಟಿದ್ದ;
'ನೀನೂ ಆಟಕ್ಕೂ ಇಲ್ಲ
ಲೆಖ್ಖಕ್ಕೂ ಇಲ್ಲ'

[ಆಕಾಶವಾಣಿ, ಮೈಸೂರು ಕೃಪೆ]

ಡಾ. ಎಂ. ಎಸ್. ವೇದಾ

ಮೈಸೂರಿನಲ್ಲಿ ಕರ್ನಾಟಕದ ಮಹಿಳಾ ಸ್ವಾಯತ್ತ ಸಂಸ್ಥೆಗಳ ಸಮಾವೇಶ– ಡಿಸೆಂಬರ್ 10 ಮತ್ತು 11 ರಂದು

ಪ್ರಿಯ ಗೆಳತಿಯರೆ,

ಈ ಪತ್ರವನ್ನು ಪ್ರಾರಂಭಿಸುವ ಮೊದಲು ನಮ್ಮ ಪರಿಚಯವನ್ನು ಹೇಳಿಕೊಳ್ಳುವುದು ಅಗತ್ಯವಿದ್ದೀತು. 1979 ರಿಂದ ಮೈಸೂರಿನಲ್ಲಿ ನಾವು ಸ್ವಾಯತ್ತ ಮಹಿಳಾ ಸಂಸ್ಥೆಯಾಗಿ ಕೆಲಸ ಮಾಡುತ್ತಿದ್ದೇವೆ. ಯಾವ ರಾಜಕೀಯ ಪಕ್ಷಕ್ಕೂ ಅಂಗಸಂಸ್ಥೆಯಾಗಿರದ ಅನುದಾನಿತ ಸಂಸ್ಥೆಯೂ ಆಗಿರದ ಈ ವೇದಿಕೆ ಮಹಿಳಾವಾದಿಗಳಾದ ಮಹಿಳೆಯರನ್ನು ಸದಸ್ಯರಾಗಿ ಹೊಂದಿದೆ. ಸಮತಾವೇದಿಕೆಯು ಧರ್ಮಾತೀತವೂ ಪ್ರಜಾಸತ್ತಾತ್ಮಕವೂ ಆದ ದಾರಿಯಲ್ಲಿ ಮಹಿಳೆಯರ ಬಗ್ಗೆ ಜಾಗೃತಿ ಮೂಡಿಸುವ, ಮಹಿಳೆಯರ ನ್ಯಾಯಕ್ಕಾಗಿ ಹೋರಾಡುವ ಸಂಸ್ಥೆಯಾಗಿ ಕೆಲಸ ಮಾಡಿಕೊಳ್ಳುತ್ತಾ ಬಂದಿದೆ.

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ನಾವೆಲ್ಲರೂ ಮಹಿಳಾ ವಿಮೋಚನೆಗಾಗಿ ನಮ್ಮದೇ ರೀತಿಯಲ್ಲಿ ಕೆಲಸ ಮಾಡಿಕೊಳ್ಳುತ್ತಾ ಬಂದಿದ್ದೇವೆ. ಅನೇಕ ಸಾರಿ ರಾಷ್ಟ್ರೀಯ ಅಂತಾರಾಷ್ಟ್ರೀಯ ಸಮಾವೇಶ ಸಂಕಿರಣಗಳಲ್ಲಿ ಕರ್ನಾಟಕದ ಪ್ರತಿನಿಧಿಗಳಾಗಿ ಭಾಗವಹಿಸಿದ್ದೇವೆ. ಇಷ್ಟಾದರೂ ಕರ್ನಾಟಕದೊಳಗೆ ಕೆಲಸ ಮಾಡುತ್ತಿರುವ ನಮ್ಮ ನಮ್ಮಲ್ಲೇ ಹೆಚ್ಚಿನ ಸಂಪರ್ಕವಿಲ್ಲವಾಗಿದೆ. ಮಹಿಳಾ ಸಮಸ್ಯೆಗಳಿಗೆ ನಮ್ಮ ನಮ್ಮ ಗುಂಪುಗಳ ಮೂಲಕ ಬಿಡಿಯಾಗಿ ಹೋರಾಡುತ್ತಿದ್ದರೂ ರಾಜ್ಯ ಮಟ್ಟದ ಒಂದು ಮಹಿಳಾ ಸಮಿತಿಯೂ ಇಲ್ಲವಾಗಿದೆ. ಪರಿಸ್ಥಿತಿ ಹೀಗಿರುವುದರಿಂದ 15 ವರ್ಷಗಳು ಕಳೆದಿದ್ದರೂ ಕರ್ನಾಟಕದ ಮಹಿಳಾ ಆಂದೋಲನ ಇನ್ನೂ ಬಲವಾದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ದನಿಯಾಗಿಲ್ಲ. ಈ ಕೊರತೆ ಕರ್ನಾಟಕದ ಹಲವು ಭಾಗಗಳ, ಹಲವು ಗುಂಪುಗಳ ಗೆಳತಿಯರನ್ನು ಕಾಡಿದೆ, ಪ್ರಾಯಃ ನೀವೂ ಅಂಥವರಲ್ಲಿ ಒಬ್ಬರಾಗಿರಬಹುದು. ಈ ಕೊರತೆಯನ್ನು ತುಂಬಿಕೊಳ್ಳುವ ಉದ್ದೇಶದಿಂದ ನಮ್ಮ ಅನುಭವ ತಿಳಿವಳಿಕೆಯನ್ನು ಹೆಚ್ಚಿಸಿಕೊಂಡು ಒಟ್ಟಾಗಿ, ಬಲವಾಗಿ ಕೆಲಸ ಮಾಡುವ ಉದ್ದೇಶದಿಂದ ಸಮತಾವೇದಿಕೆಯು **1994ರ ಡಿಸೆಂಬರ್** ತಿಂಗಳ 10 ಮತ್ತು 11ರಂದು ಮೈಸೂರಿನಲ್ಲಿ ಕರ್ನಾಟಕದ ಮಹಿಳಾ ಸ್ವಾಯತ್ತ ಸಂಸ್ಥೆಗಳ ಸಮಾವೇಶವನ್ನು ಕರೆಯುತ್ತಿದೆ. ದಯಮಾಡಿ ಈ ಸಮಾವೇಶದಲ್ಲಿ ನೀವು ಭಾಗಿಗಳಾಗಬೇಕೆಂದು ನಮ್ಮ ಕೋರಿಕೆ.

ಎರಡು ದಿನಗಳ ಈ ಸಮಾವೇಶದ ಮುಖ್ಯ ಉದ್ದೇಶ ಮೇಲೆಯೇ ಹೇಳಿದಂತೆ ಪರಸ್ಪರ ಪರಿಚಯ, ಅನುಭವ ಹಂಚಿಕೆ ರಾಜ್ಯಮಟ್ಟದ ಸಮಿತಿಯ ರಚನೆ ಇದಲ್ಲದೆ ಮುಂದಿನ ನಮ್ಮ ಆಂದೋಲನದ ಆದ್ಯತೆಗಳು ಯಾವುವು, ಚಳವಳಿಯ ದಾರಿ ಯಾವುದು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಲು ನಮ್ಮ ಸಮಕಾಲೀನ ಸಂದರ್ಭ ಹಾಗೂ ಸಮಸ್ಯೆಗಳಲ್ಲಿ ಮುಖ್ಯವಾದವುಗಳನ್ನು ಎರಡು ಗೋಷ್ಠಿಗಳಲ್ಲಿ ಚರ್ಚಿಸಬೇಕೆಂದು ಯೋಚಿಸುತ್ತಿದ್ದೇವೆ. 'ಮಹಿಳೆಯ ಮೇಲಾಗುತ್ತಿರುವ ಹಿಂಸೆ' ಹಾಗೂ 'ಮಹಿಳೆಯರ ಶೈಕ್ಷಣಿಕ, ಔದ್ಯೋಗಿಕ ಅವಕಾಶಗಳು' – ಈ ಎರಡು ವಿಷಯಗಳ ಸುತ್ತ ಈ ಗೋಷ್ಠಿಗಳನ್ನು ರೂಪಿಸಲಾಗಿದೆ. ಇದರ ಒಳವಿಷಯಗಳಾಗಿ ಮೂಲಭೂತವಾದ, ಮೀಸಲಾತಿ, ಖಾಸಗೀಕರಣ, ಪರಿಸರದ ಪ್ರಶ್ನೆ ಮೊದಲಾದವು ಬರುತ್ತವೆ. ಈ ಎರಡು ಗೋಷ್ಠಿಗಳ ವಿವರಗಳನ್ನು ಮುಂದೆ ನಿಮಗೆ ಕಳಿಸಿಕೊಡುತ್ತೇವೆ.

ಮಹಿಳಾ ವಿಮೋಚನೆಗಾಗಿ ಕೆಲಸ ಮಾಡುತ್ತಿರುವ ನಾವೆಲ್ಲರೂ ಒಂದೇ ಸೈದ್ಧಾಂತಿಕ ಹಿನ್ನೆಲೆಯವರಲ್ಲದಿರಬಹುದು, ನಮ್ಮ ಕಾರ್ಯ ವಿಧಾನಗಳಲ್ಲಿ ಸೂಕ್ಷ್ಮ ವ್ಯತ್ಯಾಸಗಳಿರಬಹುದು, ಆದರೆ ನಮ್ಮೆಲ್ಲರಿಗೂ ಸಮಾನವಾದ ಸಮಸ್ಯೆಗಳಿವೆ, ಆತಂಕಗಳಿವೆ, ಇಕ್ಕಟ್ಟುಗಳಿವೆ, ಸೋಲುಗಳಿವೆ. ಇವು ನಮ್ಮನ್ನು ಒಗ್ಗೂಡಿಸುವುದು ಸಾಧ್ಯ ಮತ್ತು ನಾವು ಒಗ್ಗೂಡಬೇಕಾದ ಪರಿಸ್ಥಿತಿ ಇವತ್ತು ತೀವ್ರವಾಗಿದೆ. ಇದನ್ನು ಮನಗಂಡು ನೀವು ಈ ಯೋಜನೆಗೆ ಸಂಪೂರ್ಣ ಸಹಕಾರ ಕೊಡುತ್ತೀರೆಂದೂ ಸಮಾವೇಶದಲ್ಲಿ ಪಾಲ್ಗೊಳ್ಳುತ್ತೀರೆಂದು ನಂಬುತ್ತೇವೆ. ನಿಮ್ಮ ಬರುವಿಕೆಯನ್ನು ದಯಮಾಡಿ ಕೂಡಲೇ ತಿಳಿಸಿರೆಂದೂ ಹಾಗೂ ನಿಮಗೆ ತಿಳಿದ ಬೇರೆ ಮಹಿಳಾ ಸಂಸ್ಥೆಗಳ ವಿಳಾಸಗಳನ್ನು ನಮಗೆ ಕಳಿಸಿರೆಂದೂ ಕೇಳಿಕೊಳ್ಳುತ್ತೇವೆ.

ಸ್ನೇಹದಿಂದ
ಸಮತಾ ವೇದಿಕೆ

ಸಂಪರ್ಕ ವಿಳಾಸ : ಸಮತಾ ವೇದಿಕೆ
487, ಪ್ರೀತಿ, ಕುವೆಂಪುನಗರ, ಮೈಸೂರು-23

ಒಂದು ಪತ್ರ

● ಸುವರ್ಣಾ ಹೆಬ್ಬಾರ್

ಪ್ರಿಯರೇ,

ಬಸ್ಸುಗಳಲ್ಲಿ 'ಮಹಿಳೆಯರಿಗಾಗಿ' ಎಂಬ ಸ್ಥಾನ ಕಾಯ್ದಿರಿಸುವ ಮೀಸಲಾತಿ ವ್ಯವಸ್ಥೆಕಾಯ್ದೆಯ ಬಗ್ಗೆ ನನ್ನ ಅನಿಸಿಕೆ.

ಮೊದಲಿನಿಂದಲೂ ಸ್ತ್ರೀ ಶೋಷಣೆ ಮುಂದುವರಿದು ಬಂದಿರುವ ನಮ್ಮ ಈ ಸಮಾಜದಲ್ಲಿ ಸ್ತ್ರೀಗಾಗಿ ಮೀಸಲಾತಿ ಯಿರುವುದು ಬಹಳ ಬಹಳ ಕಡಿಮೆ ಎನ್ನಬಹುದು. ಮೀಸಲಾತಿ ನೀಡಿದ್ದೇ ಆದ ಕೆಲವಲ್ಲಿ ಸರಿಯಾದ ಸ್ಥಾನಮಾನವನ್ನು ಮಹಿಳೆಯರಿಗೆ ನೀಡದೆ, ನೀಡಿದರೂ ಅಲ್ಲಿ ಯಾವುದೋ ಸಮಸ್ಯೆಗೆ ಎಡೆಮಾಡಿರುವ ಇಂದಿನ ಸಮಾಜದಲ್ಲಿ ಸಿಕ್ಕಿರುವಂತಹ ಮೀಸಲಾತಿ ವ್ಯವಸ್ಥೆಯನ್ನು ಸರಿಯಾಗಿ ಉಳಿಸಿಕೊಳ್ಳುವುದು ಜಾಣತನ. ಈ ವಿಷಯದಲ್ಲಿ ನಾವೀಗಲೇ ಎಚ್ಚೆತ್ತು ವಿರೋಧಿಸಿ ನಮ್ಮ ಹಕ್ಕನ್ನು ಚಲಾಯಿಸಿ, ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳದಿದ್ದರೆ, ನಂತರ ಪ್ರಯತ್ನಿಸಿದರೂ ಉತ್ತಮ ಫಲ ದೊರೆಯದೇ ಇರಬಹುದು. ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ' ಎಂದು ಭಾವನೆಗಳ ಅದುಮಿ ಕುಳಿತುಕೊಳ್ಳಬೇಕಾಗುತ್ತದೆ. ಈಗಾಗಲೇ ಸಾಮಾನ್ಯವಾಗಿ ಯಾವ ಬಸ್ಸುಗಳಲ್ಲಿ ನೋಡಿದರೂ 'Ladies' ಎಂದು ಬರೆದಿರುವ ಕಡೆ ಕುಳಿತಿರುವವರು ಗಂಡಸರೇ. ಹೇಳಲು ಹೋದರೆ ಹೊಡೆದಾಟಕ್ಕೇ ಬರುತ್ತಾರೆ. ಇದನ್ನು ವಿರೋಧಿಸುವ ಧೈರ್ಯ ನಮ್ಮಲ್ಲಿಲ್ಲವೇ ? ಅಥವಾ ಇದ್ದರೂ ಮೂಕರಾಗಿ ನೋಡಿ ಸಹಿಸಿದ್ದೇವೆಯೇ ? ಎಂಬ ಪ್ರಶ್ನೆ ನಮ್ಮಲ್ಲಿ ನಾವೇ ಕೇಳಿಕೊಳ್ಳಬೇಕು.

ಈ ಮೀಸಲಾತಿಯ ಉದ್ದೇಶ ಹೆಣ್ಣು ಸಮಸ್ಯೆಯಿಂದ ಪಾರಾಗಲು,ಅಂದರೆ ಬಸ್ಸುಗಳಲ್ಲಿ, ಅದರಲ್ಲೂ ರಶ್ ಆದ ಬಸ್ಸುಗಳಲ್ಲಿ ಹೆಣ್ಣು ನಿಂತು ಪ್ರಯಾಣಿಸಲು ಬಿಡುತ್ತಿಲ್ಲ ಇಂದಿನ ಮೂಢ ಗಂಡಸರು. ನಿಂತಲ್ಲೇ ಕಿರುಕುಳ ಕೊಡುತ್ತಾರೆ. ಹಿಂಸಿಸುತ್ತಾರೆ. ಯಾಕಪ್ಪಾ ಬಸ್ ಹತ್ತಿದೆ, ಇಳಿದರೆ ಸಾಕಪ್ಪಾ ಅನ್ನುವಂತಾ ಪರಿಸ್ಥಿತಿ ಇಂದು ಬಸ್ಸುಗಳಲ್ಲಿ. ಇನ್ನು ಪಕ್ಕ ಕುಳಿತರೂ ಸುಮ್ಮನೆ ಕೂರುತ್ತಾರೆಯೇ? ಅದು ಅವರ ದುಶ್ಚಟಗಳಲ್ಲೊಂದಾಗಿ ಮಾರ್ಪಟ್ಟಿರುತ್ತದೆ. ಪಕ್ಕದಲ್ಲಿ ಕುಳಿತು ಹಿಂಸಿಸುತ್ತಾರೆ. ಕೈ, ಕಾಲುಗಳನ್ನು ತಾಕಿಸುತ್ತಾ, ಏನೋ ಒಂದು ಕಾರ್ಯದಲ್ಲಿ ಗೊತ್ತಿಲ್ಲದವರಂತೆಯೋ ನಟಿಸುತ್ತಾ ಕಾರ್ಯ ಸಾಧಿಸುತ್ತಾರೆ. ಇಂತಹ ತೊಂದರೆಗಳಿಂದ ನಾವು ಮುಕ್ತರಾಗಲು ಈ ಕಾಯ್ದೆಯ ಮೀಸಲಾತಿಯನ್ನು ಉಪಯೋಗಿಸಿಕೊಳ್ಳಬೇಕು. ಆದರೆ ಬಸ್ಸು ಹತ್ತಿದ ಎಲ್ಲಾ ಮಹಿಳೆಗೂ ಸೀಟು ಸಿಗುವುದು ಸಾಧ್ಯವಿಲ್ಲದಿದ್ದರೂ, ಎಲ್ಲರೂ ತೊಂದರೆಗೊಳಗಾಗುವುದಾದರೂ ತಪ್ಪಿ, ನಂತರ ನಿಧಾನವಾಗಿ ಸಮಸ್ಯೆ ಪರಿಹಾರವಾಗುತ್ತದೆ ಎನ್ನಬಹುದು. ಸುಮ್ಮನೆ ಜಗಳವಾಡಿದರೆ ಪ್ರಯೋಜನವಿಲ್ಲ, ಅದರ ಫಲನಮ್ಮದಾಗಬೇಕು. ಹೇಳಿದರೆ ಜಗಳಕ್ಕೆ ಬರುತ್ತಾರೆ, ಜಗಳವಾಡಿದರೆ ಜಟ್ಟಿ, ತುಂಬಾ ಜೋರಿನವಳು, ಜಗಳಗಂಟಿ ಎಂದೆಲ್ಲಾ ಬಿರುದು ಕೊಟ್ಟು ಅವಳ ಧೈರ್ಯವನ್ನು ಕಸಿದುಕೊಳ್ಳುತ್ತಾರೆ. ಆದರಿದಕ್ಕೆ ಅವಕಾಶ ಕೊಡದೆ ಮಹಿಳೆಯರೆಲ್ಲಾ ಒಂದು ಎಂಬ ಭಾವನೆ ಪ್ರತಿಯೊಬ್ಬರಲ್ಲೂ ಮೂಡಬೇಕು. ಕಾರಣ ಒಂದು ಹೆಣ್ಣು ಅನ್ಯಾಯ. ಅತ್ಯಾಚಾರ ಅಥವಾ ಇನ್ನಾವುದೋ ಪುರುಷರಿಂದ ಕೊಡಲ್ಪಡುವ ತೊಂದರೆಗೊಳಗಾಗಿದ್ದಾಳೆ ಎಂದಾದಲ್ಲಿ ಅವಳಿಗೆ ಧೈರ್ಯ ತುಂಬಿ, ಸಹಾಯ ನೀಡುವ ಮಹಿಳೆಯರು ಕಡಿಮೆ. ಗ್ರಾಮೀಣ ಪ್ರದೇಶದಲ್ಲಂತೂ ಇದು ಸಾಧ್ಯವೇ ಇಲ್ಲ.

ಬಸ್ಸುಗಳಲ್ಲಿನ ಈ ಮೀಸಲಾತಿ ಕಾಯ್ದೆ ಜಾರಿಗೊಳಿಸಲು ಸಾಧ್ಯವಿಲ್ಲ ಎನ್ನಲು ಬಿಡಬಾರದು, ದುರಾದೃಷ್ಟವಶಾತ್ ಸಾಧ್ಯವಿಲ್ಲವೆಂದಾದರೆ ಬಸ್ಸುಗಳಲ್ಲಿರುವ 'Ladies' ಎಂಬ ಬೋರ್ಡ್ ಅಳಿಸಿ ಹಾಕಬೇಕು. ಆ ಬೋರ್ಡ್ ಬೇರೆ, ಸ್ತ್ರೀ ನಿಂತು ಪ್ರಯಾಣಿಸುವುದು ಬೇರೆ ಆಗಿ ಆ ನಮ್ಮ ಒಂದು ಸ್ಥಾನಮಾನಕ್ಕೇ ಪೆಟ್ಟು, ಅಗೌರವ. ಆ ಫಲಕದ ಎದುರಿನಲ್ಲಿ ನಾವು ನಿಂತು ಪ್ರಯಾಣಿಸುವುದು ನಮಗೇ ನಾಚಿಕೆಗೇಡಿನ ವಿಷಯವಾಗುತ್ತದೆ. ಆದ್ದರಿಂದ ಹೆಣ್ಣಿನ ತೊಂದರೆಗಳು ಸ್ವಲ್ಪ ಮಟ್ಟಿನ ಪರಿಹಾರವಾಗುವ ಈ ಮೀಸಲಾತಿ ವ್ಯವಸ್ಥೆ ಕಾಯ್ದೆ ಜಾರಿಗೆ ಬರುತ್ತದೆ ಎಂದಾದರೆ ಸಂತೋಷ.

ನಮ್ಮ ಹಕ್ಕು, ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ಸ್ತ್ರೀ ಏಳಿಗೆಗೆ ಪ್ರಯತ್ನಿಸಬೇಕಾದಲ್ಲಿ ಮಹಿಳೆಯರೆಲ್ಲಾ ಒಂದಾಗಿ ಸರ್ಕಾರ ನಮಗಾಗಿ ನೀಡಿರುವ ಮೀಸಲಾತಿ ಸೌಲಭ್ಯವನ್ನು ಆದಷ್ಟು ಬೇಗ ಉಪಯೋಗಿಸಿಕೊಂಡಲ್ಲಿ ಉತ್ತಮ ಎನ್ನಬಹುದು.

ನನ್ನ ಹೆಸರು ಸುವರ್ಣ ಹೆಬ್ಬಾರ್ ಎಂದು, ನೀವು ನನ್ನ ತಂಗಿಗೆಕಳಿಸಿದ ಈ 'ಮಾನಸ' ಪ್ರತಿಯನ್ನು ಓದಿದೆ. ತುಂಬಾ ಉತ್ತಮ ಪತ್ರಿಕೆ ಎಂದು ನನಗನ್ನಿಸಿತು. ಅದರಲ್ಲಿ ಕೇಳಿದಂತೆ ನನ್ನ ಈ ಅಭಿಪ್ರಾಯವನ್ನು ತಿಳಿಸಿದ್ದೇನೆ.

ಕರ್ನಾಟಕ ಲೇಖಕಿಯರ ಸಂಘ (ರಿ.)

ಕರ್ನಾಟಕ ಲೇಖಕಿಯರ ಸಂಘವು 1994ರ ಡಿಸೆಂಬರ್ 4 ಮತ್ತು 5 ರಂದು (ಭಾನುವಾರ ಮತ್ತು ಸೋಮವಾರ) ಮೈಸೂರು ಅಥವಾ ಮಡಿಕೇರಿಯಲ್ಲಿ ಎರಡು ದಿನಗಳ ಸ್ತ್ರೀವಾದಿ ಸಾಹಿತ್ಯ ಶಿಬಿರವನ್ನು ನಡೆಸಲು ಉದ್ದೇಶಿಸಿದ್ದು, ಈ ಶಿಬಿರದಲ್ಲಿ ಭಾಗವಹಿಸಲು ನೀವು ಆಸಕ್ತಿ ಉಳ್ಳವರಾಗಿದ್ದೀರೆಂದು ಭಾವಿಸಿದ್ದೇವೆ. ಸ್ತ್ರೀವಾದಿ ಅಧ್ಯಯನವು ಸಾಹಿತ್ಯಕವಾಗಿಯೂ, ಸಾಮಾಜಿಕವಾಗಿಯೂ ಅತ್ಯಂತ ಮಹತ್ವದ ವಿಷಯವಾಗಿರುವುದರಿಂದ ಲೇಖಕಿಯಾಗಿ ಈ ಶಿಬಿರದಲ್ಲಿ ನಿಮ್ಮ ಭಾಗವಹಿಸುವಿಕೆ ಹೆಚ್ಚು ಅರ್ಥಪೂರ್ಣವಾಗಲಿದೆ.

★ ಶಿಬಿರಾರ್ಥಿಗಳಿಗೆ ಅಧ್ಯಯನಕ್ಕಾಗಿ ಇದರೊಂದಿಗೆ ಕೆಲವು ಗ್ರಂಥಗಳ ವಿವರಗಳನ್ನು ನೀಡಿದ್ದೇವೆ. ನಿಮಗೆ ಒದಗಿಸಲಾಗಿರುವ ಆಕರ ಸಾಮಗ್ರಿಯನ್ನು ಅಧ್ಯಯನ ಮಾಡಿಕೊಂಡು ಬಂದು, ವಿವಿಧ ಗೋಷ್ಠಿಗಳಲ್ಲಿ ನಡೆಯಬೇಕಾದ ಚರ್ಚೆಯನ್ನು ಸಾರ್ಥಕಗೊಳಿಸುವಿರಾಗಿ ನಿರೀಕ್ಷಿಸುತ್ತೇವೆ.

★ ಎಲ್ಲಾ ಶಿಬಿರಾರ್ಥಿಗಳು ಎರಡು ದಿನ ಸಂಪೂರ್ಣವಾಗಿ ಶಿಬಿರದಲ್ಲಿ ಹಾಜರಿದ್ದು ಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ವಿನಂತಿಸುತ್ತೇನೆ.

★ ಶಿಬಿರದಲ್ಲಿ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಸಂಘವು ನೋಡಿಕೊಳ್ಳುವುದು. ಶಿಬಿರಾರ್ಥಿಗಳು ತಮ್ಮ ತಮ್ಮ ಸಾರಿಗೆ ವೆಚ್ಚವನ್ನು ತಾವೇ ಭರಿಸಬೇಕು.

★ ಭಾಗವಹಿಸಲು ಆಸಕ್ತಿ ಇರುವವರು ಕೂಡಲೇ ಕೆಳಕಂಡ ವಿಳಾಸಕ್ಕೆ ಪತ್ರ ಬರೆದಲ್ಲಿ ಅವರಿಗೆ ಉಳಿದ ವಿವರಗಳನ್ನು ತಿಳಿಸಲಾಗುವುದು.

ವಿಳಾಸ : ಹೇಮಲತಾ ಮಹಿಷಿ
'ಶಶಿಕಿರಣ್', ನಂ. 209
18ನೇ ಕ್ರಾಸ್, ಮಲ್ಲೇಶ್ವರಂ
ಬೆಂಗಳೂರು - 560 055
ದೂರವಾಣಿ : 3347114

—: ಆಕರ ಪುಸ್ತಕಗಳ ಪಟ್ಟಿ :—

1. ಮಹಿಳೆ, ಸಾಹಿತ್ಯ, ಸಮಾಜ : ಡಾ॥ ವಿಜಯಾ ದಬ್ಬೆ, ರಚನಾ ಪ್ರಕಾಶನ, ಮೈಸೂರು
2. ವಿಮೋಚನೆಯೆಡೆಗೆ (ಅನು) : ಸಮತಾ ವೇದಿಕೆ, ಮೈಸೂರು
3. ಸ್ತ್ರೀವಾದ (ಅನು) : ಸಮತಾ ವೇದಿಕೆ, ಮೈಸೂರು
4. ಮಹಿಳೆ - ಬಿಡುಗಡೆಯ ಹಾದಿಯಲ್ಲಿ : ಎನ್. ಗಾಯತ್ರಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
5. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ : ಸಂ-ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ —ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ
6. ಸ್ತ್ರೀ-ಪುರುಷ (ಅನು) : ಸರಸ್ವತಿ ರಿಸಬುಡ್, ಇಳಾ ಪ್ರಕಾಶನ, ಬೆಂಗಳೂರು.
7. ಮಹಿಳಾ ಅಧ್ಯಯನ : ಸಂಪಾದಕಿ—ವೀಣಾ ಶಾಂತೇಶ್ವರ, (ನಾಗೇಶ್‌ಹೆಗಡೆ ಅಭಿನಂದನ ಗ್ರಂಥ) ಧಾರವಾಡ
8. ಭಾರತೀಯ ಸ್ತ್ರೀವಾದ : ಸಂ. ಮನು ಚಕ್ರವರ್ತಿ, ಅಕ್ಷರ ಪ್ರಕಾಶನ, ಸಾಗರ.
9. ಸ್ತ್ರೀವಾದ ಸಾಹಿತ್ಯ ವಿಮರ್ಶೆ : ಕೇಶವಶರ್ಮ, ಅನ್ವೇಷಣೆ ಪ್ರಕಾಶನ, ವಿಜಯನಗರ, ಬೆಂಗಳೂರು.
10. ಮುಡಿ ಮಲ್ಲಿಗೆ : ಸಂ. ಸವಿತಾ ನಾಗಭೂಷಣ, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ
11. ಸ್ತ್ರೀ ಸಂವೇದನೆಯ ಸ್ವರೂಪ : (ಪುನರ್ ಮೌಲ್ಯೀಕರಣ ಮಾಲೆ) ಕರ್ನಾಟಕ ಸಾಹಿತ್ಯ ಅಕಾಡೆಮಿ
12. ಸ್ತ್ರೀವಾದಿ ಚಿಂತನೆ : ಕರ್ನಾಟಕ ಸಾಹಿತ್ಯ ಅಕಾಡೆಮಿ

REGD NO. KRNA 271

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ



BOOK-POST

C.G. MANJULA
9, 3rd Cross
Markham Road
Ashok Nagar
BANGALORE- 560 025.

ವಿಳಾಸ :
" ಮಾನಸ "
ಪಂಚಾಯಿತಿ ರಸ್ತೆ,
ಕಾಡುಗೋಡಿ
ಬೆಂಗಳೂರು-560 067